2016-2017ನೇ ಸಾಲಿನ

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ

ವಿಶೇಷ ವರದಿ – I

ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಭರವಸೆ
ಸಂಖ್ಯೆ: 5356/2015– "ಬೆಂಗಳೂರು ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ತ್ಯಾಜ್ಯದ ವಿಂಗಡಣಾ ಕಾರ್ಯಕ್ಕೆ ಒತ್ತು ನೀಡಿ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಮರು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕ್ರಮಕೈಗೊಳ್ಳುವ ಬಗ್ಗೆ"

ಮಾನ್ಯ ಸಭಾಪತಿಯವರಿಗೆ ಸಲ್ಲಿಸಿದ ದಿನಾಂಕ:02–05–2018

ವಿಧಾನ ಪರಿಷತ್ತಿಗೆ ಸಲ್ಲಿಸಿದ ದಿನಾಂಕ:

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಪ್ರಶ್ನೆಗಳ ಶಾಖೆ
ವಿಧಾನಸೌಧ, ಬೆಂಗಳೂರು – 560 001.

ಕರ್ನಾಟಕ ವಿಧಾನ ಪರಿಷತ್ತು

2016–2017ನೇ ಸಾಲಿನ

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ

ವಿಶೇಷ ವರದಿ – I

ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ: 5356/2015– "ಬೆಂಗಳೂರು ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ತ್ಯಾಜ್ಯದ ವಿಂಗಡಣಾ ಕಾರ್ಯಕ್ಕೆ ಒತ್ತು ನೀಡಿ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಮರು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕ್ರಮಕೈಗೊಳ್ಳುವ ಬಗ್ಗೆ"

ಮಾನ್ಯ ಸಭಾಪತಿಯವರಿಗೆ ಸಲ್ಲಿಸಿದ ದಿನಾಂಕ:02–05–2018

ವಿಧಾನ ಪರಿಷತ್ತಿಗೆ ಸಲ್ಲಿಸಿದ ದಿನಾಂಕ: 06.05.2018

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಪ್ರಶ್ನೆಗಳ ಶಾಖೆ
ವಿಧಾನಸೌಧ, ಬೆಂಗಳೂರು–560001

ವಿಷಯ ಸೂಚಿ

ಕ್ರಮ ಸಂಖ್ಯೆ	ವಿಷಯಾನುಕ್ರಮಣಿಕೆ	ಪುಟ ಸಂಖ್ಯೆ
01	ಸಮಿತಿಯ ರಚನೆ	i
02	ಮುನ್ನುಡಿ	ii-iii
03	ವರದಿ	1-6
04	ಅನುಬಂಧಗಳು (I ರಿಂದ III ರವರೆಗೆ)	7-27

ಸಮಿತಿಯ ರಚನೆ

2016–2017ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ
ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರ

ಅಧ್ಯಕ್ಷರು
ಶ್ರೀ ಬಸವರಾಜ ಎಸ್. ಹೊರಟ್ಟಿ

ಸದಸ್ಯರುಗಳು

ಶ್ರೀಯುತರುಗಳಾದ:–

01.	ಕೆ.ಸಿ.ಕೊಂಡಯ್ಯ	ಸದಸ್ಯರು, ವಿಧಾನ ಪರಿಷತ್ತಿನ ಭರವಸೆಗಳ ಸಮಿತಿ
02.	ಬಸವರಾಜ ಪಾಟೀಲ್ ಇಟಗಿ	——"——
03.	ಕೆ.ಟಿ.ಶ್ರೀಕಂಠೇಗೌಡ	——"——
04.	ಭಾನುಪ್ರಕಾಶ	——"——
05.	ರಘುನಾಥರಾವ್ ಮಲ್ಕಾಪೂರೆ	——"——
06.	ಶರಣಪ್ಪ ಮಟ್ಟೂರ	——"——
07.	ಟಿ.ಎ.ಶರವಣ	——"——
08.	ಬಿ.ಎಸ್.ಸುರೇಶ್	——"——

ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿಗಳು

ಶ್ರೀಯುತರುಗಳಾದ:–

01.	ಕೆ.ಆರ್.ಮಹಾಲಕ್ಷ್ಮಿ	ಕಾರ್ಯದರ್ಶಿ(ಪ್ರ)
02.	ಎಸ್.ನಿರ್ಮಲ	ಜಂಟಿ ಕಾರ್ಯದರ್ಶಿ(ಪ್ರ)
03.	ಮೋಹನ್ ಕೆ. ಮುಗಳಿ	ಅಧೀನ ಕಾರ್ಯದರ್ಶಿ

ಮುನ್ನುಡಿ

ವಿಧಾನ ಪರಿಷತ್ತಿನ 129ನೇ ಅಧಿವೇಶನದ ದಿನಾಂಕ:26.11.2015ರಂದು ನಡೆದ ಉಪವೇಶನದಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ತಾರಾಅನೂರಾಧ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:3651/2015 "ಬೆಂಗಳೂರು ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ತ್ಯಾಜ್ಯದ ಬಿಂಗಡಣಾ ಕಾರ್ಯಕ್ಕೆ ಒತ್ತು ನೀಡುವ ಬಗ್ಗೆ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಮರು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕೈಗೊಳ್ಳುವ" ಕುರಿತು ಕೇಳಿದ ಪ್ರಶ್ನೆಗೆ ಸರ್ಕಾರವು ತ್ಯಾಜ್ಯವನ್ನು ಮರುಬಳಕೆಗೆ ಉಪಯೋಗಿಸಿಕೊಳ್ಳಲು ಅದನ್ನು ಬೇರ್ಪಡಿಸಿದ ರೀತಿಯಲ್ಲೇ ಸಂಗ್ರಹಿಸಿ, ಸಾಗಿಸಿ, ಸಂಸ್ಕರಿಸಲು ಹೊಸದಾಗಿ ಟೆಂಡರ್ ನಿಯಮಗಳನ್ನು ಮಾರ್ಪಡಿಸಿದ್ದು, 95 ವಾರ್ಡ್‌ಗಳಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಇನ್ನು 103 ವಾರ್ಡ್‌ಗಳಿಗೆ ಟೆಂಡರ್ ಕರೆಯುವ ಪ್ರಕ್ರಿಯೆ ಚಾಲನೆಯಲ್ಲಿದೆ. ಇದಲ್ಲದೆ ನೆದರ್‌ಲ್ಯಾಂಡ್ ಸರ್ಕಾರದೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಸಹಯೋಗಕ್ಕಾಗಿ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಅದರಡಿಯಲ್ಲಿಯೂ ನೆದರ್‌ಲ್ಯಾಂಡ್ ದೇಶದ ವೇಸ್ಟ್ ಟು ವ್ಯಾಲ್ಯೂ ಸಮೂಹದ ಮೆ:ನೆಕ್ಸಸ್ ನೋವ್ಸ್ ಸಂಸ್ಥೆಯವರು ಪಾಲಿಕೆಯ ತ್ಯಾಜ್ಯದಿಂದ ಪ್ರತಿದಿನ 600 ಟನ್ ಸಾಮರ್ಥ್ಯದ ವಿದ್ಯುತ್ ಉತ್ಪಾದಿಸುವ (ವೇಸ್ಟ್-ಟು-ಎನರ್ಜಿ) ಪ್ರಾಯೋಗಿಕ ಘಟಕ ಸ್ಥಾಪನೆಗೆ ಮುಂದೆ ಬಂದಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ ಎಂದು ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ನೀಡಿದ ಭರವಸೆ ಮೇರೆಗೆ ಈ ಭರವಸೆಯನ್ನು ಸಮಿತಿಯು ದಿನಾಂಕ:06.09.2017, 4.10.2017 (ಸ್ಥಳ ವೀಕ್ಷಣೆ), 24.10.2017, 07.11.2017, 19.12.2017 ಮತ್ತು 24.10.2017ರಂದು ನಡೆದ ಒಟ್ಟು 06 ಸಮಿತಿ ಸಭೆಗಳಲ್ಲಿ ಸುದೀರ್ಘವಾಗಿ ಚರ್ಚಿಸಿ ಪರಿಶೀಲಿಸಲಾಗಿರುತ್ತದೆ.

ದಿನಾಂಕ: 4.10.2017ರಂದು ಸಮಿತಿಯು, ಮಂಡೂರಿನ ತ್ಯಾಜ್ಯ ವಿಲೇವಾರಿ ಸಂಸ್ಕರಣಾ ಘಟಕದ ಸ್ಥಳ ಪರಿಶೀಲನೆ ನಡೆಸಿ ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಂಡು, ನಗರಾಭಿವೃದ್ಧಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ದಿನಾಂಕ:24.10.2017ರ ಸಮಿತಿ ಸಭೆಯಲ್ಲಿಮೆ: ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈ.ಲಿ., ಸಂಸ್ಥೆಯವರಿಂದ ಹೇಳಿಕೆಯನ್ನು ಪಡೆಯಲಾಗಿರುತ್ತದೆ.

ಜೂನ್, 2005ರಲ್ಲಿಯೇ ಮಂಡೂರಿನಲ್ಲಿ ತ್ಯಾಜ್ಯ ವಿಲೇವಾರಿ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಒಪ್ಪಂದವನ್ನು ಮಾಡಿಕೊಂಡಿದ್ದರೂ ಈ ಘಟಕವು ಈವರೆಗೆ ಸ್ಥಾಪನೆಯಾಗದೆ ವಿಳಂಬವಾಗಿರುವುದಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಿರ್ಲಕ್ಷ್ಯತನವೇ ಕಾರಣವಾಗಿದ್ದು ಇದಕ್ಕೆ ಅಧಿಕಾರಿಗಳೇ ನೇರ ಹೊಣೆಗಾರರೆಂದು ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ.

ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಇಂತಹ ಯೋಜನೆಯನ್ನು ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಪ್ರಾರಂಭಿಸಲು ಮುಂದೆ ಬಂದಿರುವಂತಹ ಮೆ: ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈ.ಲಿ., ಸಂಸ್ಥೆಯವರು, ಮಂಡೂರಿನ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ "ವೆಸ್ಟ್-ಟು-ಎನರ್ಜಿ" ವಿದ್ಯುತ್ ಘಟಕವು ಕಾರ್ಯಾರಂಭಗೊಳ್ಳಬೇಕಾದಲ್ಲಿ ಸಂಧಾನದ (Arbitration) ಮೂಲಕ ಸಮಸ್ಯೆಯನ್ನುಇತ್ಯರ್ಥಪಡಿಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ದಿನಾಂಕ:31.03.2018 ಹಾಗೂ 17.04.2018ರಂದು ನಡೆದ ಸಮಿತಿ ಸಭೆಗಳಲ್ಲಿ ಕರಡು ವರದಿಯನ್ನು ಪರಿಶೀಲಿಸಿ ಅಂಗೀಕರಿಸಿರುತ್ತದೆ.

ಸಮಿತಿಯ ಸಭೆಗಳಿಗೆ ಹಾಜರಾಗಿ ಸಮಿತಿಯು ಬಯಸಿದಂತಹ ಅವಶ್ಯಕ ಮಾಹಿತಿಗಳನ್ನು ಒದಗಿಸಿದ ನಗರಾಭಿವೃದ್ಧಿ ಇಲಾಖಾಧಿಕಾರಿಗಳಿಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಸಂಪನ್ಮೂಲ ಇಲಾಖೆಗಳ ಅಧಿಕಾರಿಗಳಿಗೆ ಮತ್ತು ವಿಧಾನ ಪರಿಷತ್ತಿನ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಸಮಿತಿಯು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ.

ಬೆಂಗಳೂರು
ದಿನಾಂಕ:17.04.2018

ಬಸವರಾಜ ಎಸ್. ಹೊರಟ್ಟಿ
ಅಧ್ಯಕ್ಷರು
ವಿಧಾನ ಪರಿಷತ್ತಿನ ಭರವಸೆಗಳ ಸಮಿತಿ

ವರದಿ

ವಿಧಾನ ಪರಿಷತ್ತಿನ 129ನೇ ಅಧಿವೇಶನದ ದಿನಾಂಕ:26.11.2015ರಂದು ನಡೆದ ಉಪವೇಶನದಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ತಾರಾಅನೂರಾಧ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:3651/2015 "ಬೆಂಗಳೂರು ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ತ್ಯಾಜ್ಯದ ವಿಂಗಡಣಾ ಕಾರ್ಯಕ್ಕೆ ಒತ್ತು ನೀಡುವ ಬಗ್ಗೆ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಮರು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕೈಗೊಳ್ಳುವ" ಕುರಿತು ಕೇಳಿದ ಪ್ರಶ್ನೆಗೆ ಸರ್ಕಾರವು ತ್ಯಾಜ್ಯವನ್ನು ಮರುಬಳಕೆಗೆ ಉಪಯೋಗಿಸಿಕೊಳ್ಳಲು ಅದನ್ನು ಬೇರ್ಪಡಿಸಿದ ರೀತಿಯಲ್ಲೇ ಸಂಗ್ರಹಿಸಿ, ಸಾಗಿಸಿ, ಸಂಸ್ಕರಿಸಲು ಹೊಸದಾಗಿ ಟೆಂಡರ್ ನಿಯಮಗಳನ್ನು ಮಾರ್ಪಡಿಸಿದ್ದು, 95 ವಾರ್ಡ್‌ಗಳಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಇನ್ನು 103 ವಾರ್ಡ್‌ಗಳಿಗೆ ಟೆಂಡರ್ ಕರೆಯುವ ಪ್ರಕ್ರಿಯೆ ಚಾಲನೆಯಲ್ಲಿದೆ. ಇದಲ್ಲದೆ ನೆದರ್‌ಲ್ಯಾಂಡ್ ಸರ್ಕಾರದೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಸಹಯೋಗಕ್ಕಾಗಿ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಅದರಡಿಯಲ್ಲಿಯೂ ನೆದರ್‌ಲ್ಯಾಂಡ್ ದೇಶದ ವೇಸ್ಟ್ ಟು ವ್ಯಾಲ್ಯೂ ಸಮೂಹದ ಮೆ:ನೆಕ್ಸಸ್ ನೋವ್ಸ್ ಸಂಸ್ಥೆಯವರು ಪಾಲಿಕೆಯ ತ್ಯಾಜ್ಯದಿಂದ ಪ್ರತಿದಿನ 600 ಟನ್ ಸಾಮರ್ಥ್ಯದ ವಿದ್ಯುತ್ ಉತ್ಪಾದಿಸುವ (ವೇಸ್ಟ್ ಟು ಎನರ್ಜಿ) ಪ್ರಾಯೋಗಿಕ ಘಟಕ ಸ್ಥಾಪನೆಗೆ ಮುಂದೆ ಬಂದಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ ಎಂದು ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ನೀಡಿದ ಭರವಸೆ ಮೇರೆಗೆ ಈ ಭರವಸೆಯನ್ನು ಸಮಿತಿಯು ದಿನಾಂಕ:06.09.2017, 4.10.2017 (ಸ್ಥಳ ಪರಿವೀಕ್ಷಣೆ), 24.10.2017, 07.11.2017, 19.12.2017, ಮತ್ತು 23.03.2018ರಂದು ನಡೆದ ಒಟ್ಟು 06 ಸಮಿತಿ ಸಭೆಗಳಲ್ಲಿ ಸುದೀರ್ಘವಾಗಿ ಚರ್ಚಿಸಿ ಪರಿಶೀಲಿಸಲಾಗಿರುತ್ತದೆ. ಪ್ರಶ್ನೆ ಸಂಖ್ಯೆ:3651/2015ಗೆ ಮಾನ್ಯ ಸಚಿವರು ನೀಡಿದ ಉತ್ತರವನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ. ದಿನಾಂಕ:23.03.2018ರ ಸಭೆಗೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಅನುಬಂಧ–2ರಲ್ಲಿ ತೋರಿಸಲಾಗಿದೆ.

ಸಮಿತಿಯು ದಿನಾಂಕ:04.10.2017ರಂದು ಮಂಡೂರಿನ ತ್ಯಾಜ್ಯ ವಿಲೇವಾರಿ ಸಂಸ್ಕರಣಾ ಘಟಕದ ಸ್ಥಳ ಪರಿವೀಕ್ಷಣೆ ನಡೆಸಿರುತ್ತದೆ. ಸಮಿತಿಗೆ ನಗರಾಭಿವೃದ್ಧಿ ಇಲಾಖಾಧಿಕಾರಿಗಳು, ಇಂಧನ ಇಲಾಖಾಧಿಕಾರಿಗಳು, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಒದಗಿಸಿದ ಮಾಹಿತಿ ಹಾಗೂ ವಿಧಾನಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯು ಇಂಧನ ಇಲಾಖೆಯ ಮೇಲೆ ನೀಡಿರುವ 132ನೇ ವರದಿ ಮತ್ತು ಮೆ: ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈ.ಲಿ.,ಸಂಸ್ಥೆಯ ಮಾಲೀಕರು ಸಮಿತಿಯ ಮುಂದೆ ನೀಡಿದ ಹೇಳಿಕೆಯ ಮೇರೆಗೆ ಈ ಕೆಳಕಂಡ ಅಂಶಗಳು ಸಮಿತಿಯ ಗಮನಕ್ಕೆ ಬಂದಿರುತ್ತದೆ.

ಸಮಿತಿಯು ಗಮನಿಸಿದ ಅಂಶಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2002ರಲ್ಲಿ ಟೆಂಡರ್ ಪ್ರಕ್ರಿಯೆ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. 2003ರಲ್ಲಿ ಟೆಂಡರ್ ತೆರೆಯಲಾಗಿದ್ದು 2004ರಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಿ ದಿನಾಂಕ: 24ನೇ ಜೂನ್, 2005ರಲ್ಲಿ ಮೆ: ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈ.ಲಿ., ಸಂಸ್ಥೆಯವರೊಡನೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಒಪ್ಪಂದವಾದ ನಂತರ ಆಗಸ್ಟ್, 2008ರಲ್ಲಿ ಭೂ ಮತ್ತು ಪರಿಸರ ಇಲಾಖೆಯು ಅನುಮತಿಯನ್ನು ನೀಡಿರುತ್ತದೆ. ಒಟ್ಟಾರೆಯಾಗಿ ಕರಾರು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು 5 ವರ್ಷ 7 ತಿಂಗಳ ಅವಧಿಯನ್ನು ತೆಗೆದುಕೊಳ್ಳಲಾಗಿರುತ್ತದೆ.

ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ ನಆಇ/248/ಎಂಎಸ್‌ವೈ/2007, ದಿನಾಂಕ: 20/12/2007ರಂತೆ ಸರ್ಕಾರದ ಆದೇಶವಾಗಿರುತ್ತದೆ ಮತ್ತು ಮೆ: ಶ್ರೀನಿವಾಸ ಗಾಯತ್ರಿ ರಿಸೋಸರ್ಸ ರಿಕವರಿ

ಪ್ರೈವೇಟ್ ಲಿಮಿಟೆಡ್, ಇವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ಸಂಸ್ಕರಣಾ ಘಟಕ ಸ್ಥಾಪನೆ ಹಾಗೂ ತ್ಯಾಜ್ಯ ವಸ್ತುಗಳಿಂದ ವಿದ್ಯುತ್ ಉತ್ಪಾದಿಸುವ ಬಗ್ಗೆ ಒಟ್ಟಾರೆ ಸುಮಾರು 35 ಎಕರೆ ಜಮೀನಿನಲ್ಲಿ 06 ಎಕರೆ ಜಮೀನನ್ನು ಅಡಮಾನ (Mortgage) ಮಾಡಿ ಸಾಲ ಪಡೆಯಲು ಅನುಮತಿಸಿ 14 ತಿಂಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಬೇಕೆಂಬ ಷರತ್ತು ವಿಧಿಸಲಾಗಿರುತ್ತದೆ.

ದಿನಾಂಕ: 18.06.2008ರಲ್ಲಿ ಒಪ್ಪಂದವನ್ನು ರದ್ದುಗೊಳಿಸುವ ಬಗ್ಗೆ ಪ್ರಥಮ ನೋಟಿಸ್‌ನ್ನು ಜಾರಿಮಾಡಲಾಗಿರುತ್ತದೆ. ಈ ಸಂಬಂಧದಲ್ಲಿ ಸದರಿ ಸಂಸ್ಥೆಯವರು ದಿನಾಂಕ:16.07.2008ರಲ್ಲಿಯೇ ಉತ್ತರಿಸಿರುತ್ತಾರೆ. ದಿನಾಂಕ: 25.03.2008ರಲ್ಲಿ 2ನೇ ನೋಟಿಸ್ ಜಾರಿ ಮಾಡಲಾಗಿರುತ್ತದೆ.ಅಂತಿಮವಾಗಿ ದಿನಾಂಕ 30.10.2008ರಲ್ಲಿ ಅಂತಿಮ ನೋಟಿಸ್ ಜಾರಿ ಮಾಡಿ ದಿನಾಂಕ 23.09.2014ರಲ್ಲಿ ಒಪ್ಪಂದವನ್ನು ರದ್ದುಪಡಿಸಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ 2008ರಲ್ಲಿ ಇಂಡಿಯನ್ ಬ್ಯಾಂಕ್, ಮ್ಯಾನೇಜರ್ ಇವರಿಗೆ ಪತ್ರವನ್ನು ಬರೆದು ಮೆ: ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈ.ಲಿ., ಸಂಸ್ಥೆಯವರಿಗೆ ಬ್ಯಾಂಕ್ ಸಾಲವನ್ನು ಅಂದರೆ ಈಗಾಗಲೇ ಮಂಜೂರು ಮಾಡಿರುವ ಮೊತ್ತವನ್ನು ಹೊರತುಪಡಿಸಿ ಮುಂದಿನ ಹಣಕಾಸು ಸಹಾಯವನ್ನು ನಿಲ್ಲಿಸುವಂತೆ ಪತ್ರವನ್ನು ಬರೆದಿರುವುದು ಹಾಗೂ ಸರ್ಕಾರದಿಂದ 2008 ರಿಂದ ಈ ಸಂಸ್ಥೆಗೆ ಬಿಡುಗಡೆ ಮಾಡಬೇಕಾಗಿರುವ ಬಾಕಿ ಮೊತ್ತ ಒಟ್ಟು ರೂ.13.30 ಕೋಟಿ ಮತ್ತು ಬಡ್ಡಿಯನ್ನು ಬಿಡುಗಡೆ ಮಾಡದೆ ಸಂಸ್ಥೆಯ ಕಾರ್ಯನಿರ್ವಹಣೆಗೆ ತೊಂದರೆಯುಂಟು ಮಾಡಿರುವುದು ಹಾಗೂ ಸಕಾಲದಲ್ಲಿ ಯೋಜನೆಯನ್ನು ಪೂರ್ಣಗೊಳಿಸಿರುವುದಿಲ್ಲವೆಂಬ ಕಾರಣ ನೀಡಿ 2014ರಲ್ಲಿ ಒಪ್ಪಂದವನ್ನು ರದ್ದುಪಡಿಸಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿರುತ್ತದೆ.

ತ್ಯಾಜ್ಯ ವಿಲೇವಾರಿ ಘಟಕ ಸ್ಥಗಿತಗೊಳ್ಳಲು ಹಾಗೂ ಸ್ಥಳೀಯರ ವಿರೋಧಕ್ಕೆ ಕಾರಣ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಒಪ್ಪಂದದ ಪ್ರಕಾರ 600 ಟನ್ ಕಸವನ್ನು ಸುರಿಯುವ(ಡಂಪ್) ಬದಲಿಗೆ 2400 ಟನ್ ಕಸವನ್ನು ಸುರಿದಿದ್ದರಿಂದ (ಡಂಪ್) ತ್ಯಾಜ್ಯ ಸಂಗ್ರಹಣೆ ಜಾಸ್ತಿಯಾಗಿ ತ್ಯಾಜ್ಯ ರಾಡಿ (ಲಿಜಿಡ್) ಸಂಗ್ರಹಣೆಯಿಂದ ಪರಿಸರ ಮಾಲಿನ್ಯವಾಗಿ ಸ್ಥಳೀಯರ ವಿರೋಧಕ್ಕೆ ಕಾರಣವಾಗಿರುವುದನ್ನು ಸಮಿತಿಯು ಗಮನಿಸಿರುತ್ತದೆ. ಸದರಿ ಸಂಸ್ಥೆಯವರು ಸಿಂಗಾಪೂರ್ ಮತ್ತು ಚೈನಾ ದೇಶದಲ್ಲಿ ಇಂತಹ ಯೋಜನೆಗಳಿಗೆ ಸರ್ಕಾರವೇ ಹಣ ಹೂಡಿರುವುದು ಉದಾಹರಣೆ ಇದ್ದು, ಇಲ್ಲಿ ಮೆ: ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈ.ಲಿ., ಸಂಸ್ಥೆಯಂತಹವರು ಸ್ವತಃ ಹಣವನ್ನು ಹೂಡಿಕೆ ಮಾಡಿ ರಾಜ್ಯಕ್ಕೆ ಕೊಡುಗೆ ನೀಡಲು ಮುಂದೆ ಬಂದಿದ್ದರೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಪ್ರತಿಯೊಂದು ಹಂತದಲ್ಲಿಯೂ ಅವರಿಗೆ ಪ್ರೋತ್ಸಾಹ ಮತ್ತು ಸಹಕಾರ ನೀಡದೇ ಸಂಸ್ಥೆಯ ಆರ್ಥಿಕ ಮುಗ್ಗಟ್ಟಿಗೆ ಹಾಗೂ ಸದರಿ ಯೂನಿಟ್ ಸ್ಥಗಿತಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಡವಳಿಕೆಯೇ ಕಾರಣವಾಗಿರುವುದಕ್ಕೆ ಸಮಿತಿಯು ತನ್ನ ಆಕ್ಷೇಪವನ್ನು ವ್ಯಕ್ತಪಡಿಸುತ್ತದೆ.

ಆದಾಗ್ಯೂ, ಮೆ: ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈ.ಲಿ., ಸಂಸ್ಥೆಯವರಿಗೆ ಸರ್ಕಾರವು ರದ್ದುಪಡಿಸಿರುವ ಪರವಾನಗಿಯನ್ನು ನವೀಕರಿಸಿ ನೀಡುವಂತೆ ಹಾಗೂ ಬಾಕಿ ಮೊತ್ತವನ್ನು ಸಂದಾಯ ಮಾಡಿದರೆ, ಘಟಕವನ್ನು ಪುನರ್ ಆರಂಭಿಸಿ ಬೆಂಗಳೂರಿನ ಕಸ ಸಮಸ್ಯೆಯನ್ನು ನಿವಾರಣೆ ಮಾಡುವುದಾಗಿ ಸದರಿ ಘಟಕದ ಮುಖ್ಯಸ್ಥರು ತಿಳಿಸಿರುವ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಸದರಿ ಸಂಸ್ಥೆಯ ಕೋರಿಕೆಯನ್ವಾಧರಿಸಿ ಸರ್ಕಾರಕ್ಕೆ ವರದಿ ನೀಡುವುದಾಗಿ ದಿನಾಂಕ: 19.12.2017ರ ಸಮಿತಿ ಸಭೆಯಲ್ಲಿ ತಿಳಿಸಿರುತ್ತಾರೆ.

ದಿನಾಂಕ: 23.03.2018 ರಂದು ಸಮಿತಿಯ ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು, ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಹಾಗೂ ಇನ್ನಿತರೆಸಂಬಂಧಿಸಿದ ಸಂಪನ್ಮೂಲ ಇಲಾಖಾ ಅಧಿಕಾರಿಗಳು ಸಮಿತಿ ಸಭೆಯಲ್ಲಿ ಉಪಸ್ಥಿತರಿದ್ದು ಸಮಿತಿಗೆ ಒದಗಿಸಿದ ಮಾಹಿತಿ ಈ ಕೆಳಕಂಡಂತಿರುತ್ತದೆ. (ಅನುಬಂಧ–2)

1. ಸರ್ಕಾರದ ಆದೇಶ ಸಂಖ್ಯೆ: ನಅಇ:248:ಎಂಎಸ್‌ಡಬ್ಲ್ಯೂ: 2017, ದಿನಾಂಕ:20.12.2007ರಲ್ಲಿ ಶ್ರೀ ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈವೇಟ್ ಲಿಮಿಟೆಡ್, ಇವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ಸಂಸ್ಕರಣಾ ಘಟಕ ಸ್ಥಾಪನೆ ಹಾಗೂ ತ್ಯಾಜ್ಯ ವಸ್ತುಗಳಿಂದ ವಿದ್ಯುತ್ ಉತ್ಪಾದಿಸುವ ಬಗ್ಗೆ ಒಟ್ಟಾರೆ ಸುಮಾರು 59 ಎಕರೆ ಜಮೀನನ್ನು 33 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸರ್ಕಾರವು ಅನುಮೋದನೆ ನೀಡಿರುತ್ತದೆ.

2. ಬಿಬಿಎಂಪಿ ಹಾಗೂ ಮೆ: ಎಸ್.ಜಿ.ಆರ್.ಆರ್.ಎಲ್ ಗುತ್ತಿಗೆದಾರರ ಮಧ್ಯೆ ಒಪ್ಪಂದವಾಗಿ ಪ್ರತಿದಿನ ತ್ಯಾಜ್ಯ 600 ಟನ್ ಕೊಡಬೇಕಾಗಿದ್ದು, ಮೊದಮೊದಲು ಕಸದ ಪ್ರಮಾಣ ಇಷ್ಟೊಂದು ಬರುತ್ತಿಲ್ಲದೇ ಇರುವ ಕಾರಣ ಅದನ್ನು ಗೊಬ್ಬರ ಮಾಡಿ ಮಾರಾಟ ಮಾಡಲಾಗುತ್ತಿತ್ತು. ತ್ಯಾಜ್ಯದಿಂದ ಪವರ್ ಜನರೇಟ್ ಪ್ಲಾಂಟ್ ಹಾಕಬೇಕೆಂದು ಒಪ್ಪಂದದಲ್ಲಿ ಕರಾರು ಮಾಡಿಕೊಂಡಿರುವಂತೆ ಸದರಿ ಸಂಸ್ಥೆಯವರು ಸರ್ಕಾರದಿಂದ ಗುತ್ತಿಗೆ ಆಧಾರದ ಮೇಲೆ ನೀಡಿರುವ ಜಮೀನನ್ನು ಅಡಮಾನ ಇಟ್ಟು ಇಂಡಿಯನ್ ಬ್ಯಾಂಕಿನಿಂದ ರೂ. 19.75 ಕೋಟಿ, ಓರಿಯಂಟಲ್ ಬ್ಯಾಂಕಿನಿಂದ ರೂ. 19.00 ಕೋಟಿ, ಐ.ಎಫ್.ಸಿ.ಎಲ್., ನಿಂದ ರೂ. 14 ಕೋಟಿ ಮತ್ತು ಗುತ್ತಿಗೆದಾರರಾದ ಮೆ: ಎಸ್.ಜಿ.ಆರ್.ಆರ್.ಎಲ್., ರವರು ರೂ. 17.58 ಕೋಟಿ ಸಾಲವನ್ನು ಪಡೆದಿರುತ್ತಾರೆ.

3. ಈ ಸಂಬಂಧ ಸಾರ್ವಜನಿಕ ಉದ್ದಿಮೆಗಳ ಸಮಿತಿಯ ವರದಿಯ ಶಿಫಾರಸ್ಸುಗಳ ಬಗ್ಗೆಶಾಶ್ವತ ಪರಿಹಾರ ಕಂಡುಕೊಳ್ಳಲು ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತ ಅಧಿಕಾರಿಗಳನ್ನೊಳಗೊಂಡ ಸಭೆ ನಡೆಸಿ ಸಮಿತಿಗೆ ಸ್ಪಷ್ಟ ಮಾಹಿತಿ ನೀಡಲಾಗುವುದೆಂದು ಅಧಿಕಾರಿಗಳು ಸಮಿತಿಗೆ ಮಾಹಿತಿಯನ್ನು ಒದಗಿಸಿರುತ್ತಾರೆ.

4. ಅಲ್ಲದೆ ಸಮಿತಿ ಸಭೆಯಲ್ಲಿ ಮೌಖಿಕವಾಗಿ ಉತ್ತರಿಸುವಾಗ ಒಪ್ಪಂದದಲ್ಲಿ ಅಭಿಪ್ರಾಯಭೇದ ಇದ್ದರೆ ಸಂಧಾನದ (Arbitration) ಮೂಲಕ ಪರಿಹಾರ ಕಂಡುಕೊಳ್ಳಲು ಅವಕಾಶವಿದೆ ಎಂದು ತಿಳಿಸಿರುತ್ತಾರೆ.

ದಿನಾಂಕ: 23.03.2018ರಂದು ಮೆ: ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈ.ಲಿ., ಸಂಸ್ಥೆಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದಶ್ರೀ ರಮೇಶ್ ಬಿಂಗಿ ಅವರು ಸಮಿತಿಯ ಮುಂದೆ ನೀಡಿದ ಹೇಳಿಕೆಯು ಈ ಕೆಳಕಂಡಂತಿದೆ.(ಲಿಖಿತವಾಗಿ ಒದಗಿಸಿರುವ ಮಾಹಿತಿ ಅನುಬಂಧ–3)

1. " At this point of time, I want to give you some facts.2002ರಲ್ಲಿ ಟೆಂಡರ್ ಅವಾರ್ಡ್ ಮಾಡುವುದಕ್ಕೆ ಸುಮಾರು 2 ವರ್ಷ 7 ತಿಂಗಳ ಕಾಲಾವಕಾಶವನ್ನು ಇಲಾಖೆ ತೆಗೆದುಕೊಂಡಿತ್ತು.ಕರಾರು (Concession Agreement) ಆದ ನಂತರ ಯೋಜನೆಗಾಗಿ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಸುಮಾರು 3 ವರ್ಷಗಳ ಕಾಲಾವಕಾಶವನ್ನು ತೆಗೆದುಕೊಳ್ಳಲಾಯಿತು.ಅಲ್ಲಿಗೆ ಕರಾರು ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವುದಕ್ಕೆ ಸುಮಾರು 5 ವರ್ಷ 7 ತಿಂಗಳುಗಳಾಯಿತು. ನಂತರ ದಿನಾಂಕ:28.10.2008ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, ಮ್ಯಾನೇಜರ್, ಇಂಡಿಯನ್ ಬ್ಯಾಂಕ್, ಇವರಿಗೊಂದು ಪತ್ರ

ಬರೆದು, "not to release funds even though they have not signed any documents so far"ಎಂದು ತಿಳಿಸಿರುತ್ತಾರೆ. ಬ್ಯಾಂಕ್‌ನಲ್ಲಿ ಸಾಲವನ್ನು ನಾನು ಮಾಡಿರುತ್ತೇನೆ. ನನ್ನ ಬ್ಯಾಂಕ್ ಸಾಲಕ್ಕೂ ಅವರಿಗೂ ಏನೂ ಸಂಬಂಧ ಇರುವುದಿಲ್ಲ ಆದರೂ ಸಹ ಅವರು ಮುಂದಿನ ಹಣಕಾಸು ಸಹಾಯವನ್ನು ನಿಲ್ಲಿಸುವಂತೆ ಸೂಚಿಸಿ, They have issued a letter. ನಾವು ಮೊದಲು: ಈ ಬಗ್ಗೆ ಸರ್ಕಾರದಿಂದ ಆರ್ಡರ್ ತೆಗೆದುಕೊಂಡು ಹೋಗಿ ಬ್ಯಾಂಕ್ ಆರ್ಡರ್ ಅನ್ನು ಕ್ಯಾನ್ಸಲ್ ಮಾಡಿಸುವುದಕ್ಕೆ ಸುಮಾರು 2 ವರ್ಷಗಳ ಕಾಲಾವಕಾಶ ಬೇಕಾಯಿತು. ನಂತರ 2012ರಲ್ಲಿ ಆದೇಶ ಸಂಖ್ಯೆ:138/ಎಂಎನ್‌ಜಿ/2009ರಲ್ಲಿ ಒಟ್ಟು 11.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ಆದೇಶಿಸಲಾಗಿತ್ತು. ಆದರೆ, ಅವತ್ತಿನಿಂದ ಇಲ್ಲಿಯವರೆಗೆ ಸುಮಾರು 4 ವರ್ಷಗಳಾಗಿದ್ದರೂ ಸಹಾ ಸರ್ಕಾರ ಒಂದೇ ಒಂದು ಪೈಸೆಯನ್ನು ಸಹ ಬಿಡುಗಡೆ ಮಾಡಿರುವುದಿಲ್ಲ. ಸರ್ಕಾರ ನಮಗೆ ಬಿಡುಗಡೆ ಮಾಡಬೇಕಾಗಿರುವ ಪೆಂಡಿಂಗ್ ಬಿಲ್‌ನ ಮೊತ್ತ 13.3 ಕೋಟಿ ರೂಪಾಯಿಗಳು ಮತ್ತು ಅದರ ಬಡ್ಡಿಯನ್ನು ಸಹ ಪಾವತಿ ಮಾಡಿರುವುದಿಲ್ಲವೆಂದು ತಿಳಿಸುತ್ತಾ..... ಒಟ್ಟಾರೆಯಾಗಿ We have invested about Rs.85.45 Crores for this Project The processing plant was running successfully from 2008-10. We have supplied about 1,00,000 tonnes of Compost Manure to the Karnataka Agriculture Department, Karnataka Compost Development Corporation Ltd and Andhra Pradesh Horticulture Department.ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ರಾತ್ರಿ ಕೂಡ ಕಂಪನಿಯ ಸ್ಥಳ ಮತ್ತು ಎದುರಿನ ಪ್ರದೇಶದಲ್ಲಿ ಹೆಚ್ಚು ಕಸ ಸುರಿಯುತ್ತಿದ್ದರಿಂದ ಸಂಸ್ಕರಿಸಿಲ್ಲದ ಕಸದ ರಾಶಿ ಅಧಿಕವಾಗಿ, ವಾಸನೆ ಉಂಟಾಗಿ ಮಂಡೂರಿನ ಗ್ರಾಮಸ್ಥರಿಗೆ ತೊಂದರೆಯುಂಟಾಯಿತು. ಇದರಿಂದ ಮಂಡೂರಿನ ಗ್ರಾಮಸ್ಥರು ಇದರ ಬಗ್ಗೆ ವಿರೋಧ ವ್ಯಕ್ತಪಡಿಸಿರುತ್ತಾರೆ.

ಕಸವನ್ನು ವಿಲೇವಾರಿ ಮಾಡುವುದಕ್ಕೆ, ಸರ್ಕಾರದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ಹೆಚ್ಚು-ಕಡಿಮೆ 4 ರಿಂದ 6 ಸಲ ಟೆಂಡರ್ ಕರೆಯಲಾಗಿದ್ದು, ಎಷ್ಟು ಬಾರಿ ಟೆಂಡರ್ ಕರೆದರೂ ಸಹ not ven a single contractor is coming forward to take up the contract. ಹೊಸ ಗಾರ್ಬೇಜ್ ಏನು ಬೇಕಾಗಿಲ್ಲ. ಈಗಿರುವ ಗಾರ್ಬೇಜ್‌ನಿಂದ ಹೆಚ್ಚು-ಕಡಿಮೆ 5 ರಿಂದ 8 ವರ್ಷಗಳ ಕಾಲ ಪ್ರೋಸೆಸ್ ಮಾಡಿ power generateಮಾಡಬಹುದು. ಇದಕ್ಕೆ ಅವಕಾಶ ಮಾಡಿಕೊಡಿ ಎಂಬುದು ನನ್ನ ಬೇಡಿಕೆ ಎಂದು ತಿಳಿಸಿದರು. ಅಲ್ಲದೆ ಸರ್ಕಾರದಿಂದ different types of equipmentsಅನ್ನು ಟೆಂಡರ್ ಮಾಡುವಾಗ, ಯಾವ ರೀತಿಯ equipmentsಬೇಕೆಂದು ಕೋಟ್ ಮಾಡಿ ಎಂದು ಹೇಳಿದ್ದೇವೋ ಹಾಗೂ ಇದಕ್ಕೆ 15 ರಿಂದ 16 ಕೋಟಿ ರೂಪಾಯಿಗಳಷ್ಟು equipmentsಅನ್ನು ಸೇರಿಸುವುದಕ್ಕೆ ಹೇಳಿದ್ದೇವೆ. ಅದಕ್ಕೆ ರಾಜ್ಯ ಸರ್ಕಾರದವರು ಸರ್ಕಾರಿ ಆದೇಶ ಸಂಖ್ಯೆ: ನಅ:138:ಎಂಎನ್‌ಜಿ:2009 ದಿನಾಂಕ: 05.11.2012ರಲ್ಲಿ 10.5 ಕೋಟಿ ರೂಪಾಯಿಗಳ ಸಾಫ್ಟ್ ಲೋನ್ ಅನ್ನು ಕೊಡುತ್ತೇವೆಂದು ಉಲ್ಲೇಖವಾಗಿತ್ತು. 2012 ರಿಂದ ಇದುವರೆವಿಗೂ ನಮ್ಮ ಕಂಪನಿಗೆ ಯಾವುದೇ ರೀತಿಯ ಹಣಕಾಸನ್ನು ನೀಡಿರುವುದಿಲ್ಲವೆಂದು ತಿಳಿಸಿದರು.

ಅಂತಿಮವಾಗಿ ಸಂಸ್ಥೆಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದಶ್ರೀ ರಮೇಶ್ ಬಿಂಗಿour demands are restricted to following three things. Restoration of the Project, Clearance of pending bills and release of assured sum of Rs.10.5 Cores as mentioned in G.O.No: 138 Dt: 05.11.2012 for the projectಎಂದು ಹೇಳಿಕೆಯನ್ನು ನೀಡಿದರು.

ಸಮಿತಿಯ ಶಿಫಾರಸ್ಸುಗಳು

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಒಪ್ಪಂದದ ಪ್ರಕಾರ ದಿನಂಪ್ರತಿ 600 ಟನ್ ಕಸವನ್ನು ಸುರಿಯುವ (ಡಂಪ್) ಬದಲಿಗೆ 2400 ಟನ್ ಕಸವನ್ನು ಸುರಿದಿದ್ದರಿಂದ (ಡಂಪ್) ತ್ಯಾಜ್ಯ ಸಂಗ್ರಹಣೆ ಜಾಸ್ತಿಯಾಗಿ ರಾಡಿ(ಲಿಜೆಟ್) ಸಂಗ್ರಹಣೆಯಿಂದ ಪರಿಸರ ಮಾಲಿನ್ಯ ಉಂಟಾಗಿ ಸ್ಥಳೀಯರ ವಿರೋಧಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಂದಿನ ಅಧಿಕಾರಿಗಳೇ ನೇರ ಹೊಣೆಗಾರರಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

2. 24ನೇ ಜೂನ್, 2005ರಲ್ಲಿ ಒಪ್ಪಂದವನ್ನು ಮಾಡಿಕೊಂಡು ಕರಾರಿನಲ್ಲಿ ಈ ಯೋಜನೆಯನ್ನು 14 ತಿಂಗಳಲ್ಲಿ ಪೂರ್ಣಗೊಳಿಸಬೇಕೆಂಬ ಷರತ್ತನ್ನು ವಿಧಿಸಲಾಗಿರುತ್ತದೆ. ಆದರೆ ಪರಿಸರ ಮಾಲಿನ್ಯ ಇಲಾಖೆಯಿಂದ ಆಗಸ್ಟ್, 2008ರಲ್ಲಿ ಅನುಮತಿಯನ್ನು ನೀಡಿ 2008ನೇ ಸಾಲಿನಲ್ಲಿಯೇ ಈ ಯೋಜನೆಯನ್ನು ಒಪ್ಪಂದದ ಷರತ್ತಿನನ್ವಯ ಪೂರ್ಣಗೊಳಿಸಿರುವುದಿಲ್ಲವೆಂದು ಒಪ್ಪಂದವನ್ನು ರದ್ದುಗೊಳಿಸುವ ಸಂಬಂಧ ನೋಟಿಸ್‌ನ್ನು ಜಾರಿ ಮಾಡಲಾಗಿರುವುದು ಹಾಗೂ ಈ ಮಧ್ಯೆ 2008ರಲ್ಲಿಯೇ ಇಂಡಿಯನ್ ಬ್ಯಾಂಕ್ ಮ್ಯಾನೇಜರ್ ಅವರಿಗೆ ಸಾಲವನ್ನು ಮಂಜೂರು ಮಾಡದೆ ತಡೆಹಿಡಿಯಲು ಪತ್ರವನ್ನು ಬರೆಯಲಾಗಿರುತ್ತದೆ. ಇದರಿಂದಾಗಿ ಸದರಿ ಸಂಸ್ಥೆಯವರು ಈ ಯೋಜನೆಗೆ ವೈಯುಕ್ತಿಕವಾಗಿ 85.45 ಕೋಟಿ ಋಣವನ್ನು ಹೂಡಿಕೆ ಮಾಡಿದ್ದು ತದ ನಂತರದ ಮುಂದಿನ ಯೋಜನೆಯ ಜಾರಿಗೆ ಆರ್ಥಿಕ ಮುಗ್ಗಟ್ಟನ್ನು ಸೃಷ್ಟಿಸಿರುವುದಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಂದಿನ ಅಧಿಕಾರಗಳೇ ನೇರ ಹೊಣೆಗಾರರಾಗಿರುತ್ತಾರೆ ಎಂಬುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ಈ ಎಲ್ಲಾ ಲೋಪ ದೋಷಗಳಿಗೆ ಹೊಣೆಗಾರರಾಗಿರುವ ಅಧಿಕಾರಿ/ನೌಕರರ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

3. ಈ ಒಂದು ತ್ಯಾಜ್ಯ ವಿಲೇವಾರಿ ಘಟಕ ಯೋಜನೆಯು ದೇಶದಲ್ಲಿಯೇ ಮಾದರಿಯಾದ/ವಿಶೇಷವಾದ ಯೋಜನೆಯಾಗಿದ್ದು ಕಸದ ಸಮಸ್ಯೆಯಿಂದ ಕಂಗೆಟ್ಟಿರುವ ಬೆಂಗಳೂರು ಮಹಾನಗರದ ತ್ಯಾಜ್ಯ ಸಮಸ್ಯೆಗೆ ಸಂಪೂರ್ಣ ಪರಿಹಾರ ದೊರಕುವಂತಾಗುತ್ತದೆ.ಆದುದರಿಂದ ಈ ಯೋಜನೆಗೆ ಪ್ರೋತ್ಸಾಹ ನೀಡುವುದು ಸರ್ಕಾರದ ಆದ್ಯಕರ್ತವ್ಯವಾಗಿರುತ್ತದೆಂದು ಸಮಿತಿಯು ಅಭಿಪ್ರಾಯಪಡುತ್ತದೆ.

4. ಈ ಸಮಸ್ಯೆಯನ್ನು ಇತ್ಯರ್ಥಪಡಿಸಲು ಒಪ್ಪಂದದ ರೀತ್ಯಾ ಸಂಧಾನಕ್ಕೆ (Arbitration) ಅವಕಾಶವಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಹಾಗೂ ಮೆ: ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈ.ಲಿ., ಸಂಸ್ಥೆ ಇವರಿಬ್ಬರು ಇದನ್ನು ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಂಡು ಮಂಡೂರಿನ ತ್ಯಾಜ್ಯವನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಮರುಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಶಾಶ್ವತ ಪರಿಹಾರವನ್ನು ಕಂಡುಕೊಂಡು ಘಟಕವನ್ನು ಮೂರು ತಿಂಗಳೊಳಗಾಗಿ ಪುನರಾರಂಭಿಸಲು ಕ್ರಮಕೈಗೊಂಡು ಸಮಿತಿಗೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಸಲ್ಲಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

5. ಅಲ್ಲದೆ, ಈ ಹಂತದಲ್ಲಿ ಒಪ್ಪಂದ ರದ್ದಾದಲ್ಲಿ ಸರ್ಕಾರಕ್ಕೆ ಆರ್ಥಿಕವಾಗಿಯು ಸೇರಿದಂತೆ ಹಲವು ರೀತಿಯ ನಷ್ಟಗಳು ಉಂಟಾಗುತ್ತದೆ ಮತ್ತು ಪರಿಸರ ಮಾಲಿನ್ಯದಿಂದಾಗಿ ಸ್ಥಳೀಯರಿಗೆ ಬಹುಕಾಲದವರೆಗೆ ಬಾಧಿಸುವ ತೀವ್ರತರವಾದ ಆರೋಗ್ಯ ಸಮಸ್ಯೆಗಳು ಉಂಟಾಗುವುದಲ್ಲದೆ, ಬೆಂಗಳೂರು ನಗರದಲ್ಲಿ ಕಸದ

ವಿಲೇವಾರಿ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳುವ ಸಂಭವವು ಹೆಚ್ಚಾಗಿರುತ್ತದೆ ಎಂಬುದನ್ನು ಸಮಿತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಎಚ್ಚರಿಸುತ್ತದೆ.

ಬೆಂಗಳೂರು
ದಿನಾಂಕ: 17.04.2018

ಬಸವರಾಜ ಎಸ್.ಹೊರಟ್ಟಿ
ಅಧ್ಯಕ್ಷರು
ವಿಧಾನ ಪರಿಷತ್ತಿನ ಭರವಸೆಗಳ ಸಮಿತಿ

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಪರಿಷತ್ತು

ಅನುಬಂಧ - 1

ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3651
2 ಸದಸ್ಯರ ಹೆಸರು : ಶ್ರೀಮತಿ ತಾರಾ ಅನುರಾಧ
3 ಉತ್ತರಿಸುವ ದಿನಾಂಕ : 26-11-2015
4 ಉತ್ತರಿಸುವವರು : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನಗರದಲ್ಲಿ ಪ್ರತಿನಿತ್ಯ ಸಂಗ್ರಹಣೆಯಾಗುತ್ತಿರುವ ತ್ಯಾಜ್ಯ ಎಷ್ಟು	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಾರ್ಡ್‌ಗಳಲ್ಲಿ ದಿನಂಪ್ರತಿ ಸಂಗ್ರಹವಾಗುತ್ತಿರುವ ಕಸದ ಪ್ರಮಾಣ ಅಂದಾಜು 4000 ಟನ್.
ಆ)	ನಗರದಲ್ಲಿ ಆಗಿಂದಾಗ್ಗೆ ತ್ಯಾಜ್ಯ ಸಮಸ್ಯೆ ಉಲ್ಬಣಗೊಳ್ಳಲು ಕಾರಣವೇನು; (ವಿವರ ನೀಡುವುದು)	ಇತ್ತೀಚೆಗೆ ಪ್ರಮುಖ ತ್ಯಾಜ್ಯ ವಿಲೇವಾರಿ ಸ್ಥಳಗಳಾದ ಟೆರ್ರಾಫಾರಂ ಎಂ.ಎಸ್.ಜಿ.ಪಿ ಘಟಕಗಳಲ್ಲಿ ಹಾಗೂ ಹೊಸ ಘಟಕಗಳಲ್ಲಿಯೂ ಸಹ ಸಾರ್ವಜನಿಕರಿಂದ ಪ್ರತಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ಹಾಗೂ ದಿನಾಂಕ: 06-11-2015 ರಿಂದ ಬಿಂಗೀಪುರದಲ್ಲಿ ಘನತ್ಯಾಜ್ಯ ವಿಲೇವಾರಿ ಕಾರ್ಯವು ಸ್ಥಗಿತಗೊಂಡ ಕಾರಣ, ವಲಯಗಳಲ್ಲಿನ ತ್ಯಾಜ್ಯ ವಿಲೇವಾರಿಯಲ್ಲಿ ತೊಂದರೆ ಉಂಟಾಗಿರುತ್ತದೆ. ಈ ಸಂದರ್ಭದಲ್ಲಿ ಹಬ್ಬ-ಹರಿದಿನ ಆಚರಣೆಯಿಂದ ಹೆಚ್ಚಾಗುತ್ತಿರುವ ತ್ಯಾಜ್ಯ ಉತ್ಪಾದನೆ ಹಾಗೂ ಕಳೆದ ಮೂರು ವಾರದಿಂದ ಎಡೆಬಿಡದೇ ಸುರಿಯುತ್ತಿರುವ ಮಳೆಯಿಂದ ಘನತ್ಯಾಜ್ಯ ವಿಲೇವಾರಿಯಲ್ಲಿ ಅಡೆತಡೆಗಳುಂಟಾಗಿದ್ದು, ನಾಗರೀಕರಿಂದ ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆ ಪ್ರಯತ್ನ ನಿರೀಕ್ಷಿತ ಮಟ್ಟದಲ್ಲಿ ಆಗದೇ ಇರುವುದು ಕೂಡ ಕಾರಣವಾಗಿರುತ್ತದೆ. ನಗರದಲ್ಲಿ ತ್ಯಾಜ್ಯ ಸಮಸ್ಯೆ ಉಲ್ಬಣಗೊಳ್ಳಲು ಪ್ರಮುಖವಾದ ಕಾರಣ ತ್ಯಾಜ್ಯ ವಿಲೇವಾರಿ/ಸಂಸ್ಕರಣೆ ಘಟಕಗಳ ಕಾರ್ಯನಿರ್ವಹಣೆಗೆ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಂದ ಪ್ರತಿರೋಧ ವ್ಯಕ್ತವಾಗುತ್ತಿರುವುದು. ಈ ಹಿಂದೆ ಹಲವು ಸ್ಥಳಗಳಲ್ಲಿ ತ್ಯಾಜ್ಯವನ್ನು ಸಂಸ್ಕರಿಸದೇ ಭೂಭರ್ತಿ ಮಾಡಲಾಗುತ್ತಿದ್ದು, ಇದರಿಂದ ಸೊಳ್ಳೆಗಳು, ಹೊಣಗಳ ಹಾವಳಿಯಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗಿದ್ದು, ಸಾರ್ವಜನಿಕರ ಮನಸ್ಸಿನಲ್ಲಿ ಇದೇ ಪರಿಸ್ಥಿತಿ ಬೇರೆಡೆ ಉಂಟಾಗಬಹುದೇನೋ ಎಂಬ ಭೀತಿಯಿಂದ ಪದೇ ಪದೇ ವಿವಾದಗಳು ಉಂಟಾಗುತ್ತಿದ್ದ. ಹಾಲಿ ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು ಘಟಕವನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದ್ದು, ಇದರಿಂದ ಮೇಲೆ ತಿಳಿಸಿರುವಂತಹ ಯಾವುದೇ ತೊಂದರೆಗಳು ಉಂಟಾಗುವುದಿಲ್ಲ ಎಂಬ ಅರಿವನ್ನು ಹಾಗೂ ಈ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಿ ನಿವಾರಣೆಗಳನ್ನು ನಿವಾರಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ. ಪ್ರಸ್ತುತ ಘಟಕಗಳಲ್ಲಿನ ಸುತ್ತಮುತ್ತಲಿನ ಸಾರ್ವಜನಿಕರನ್ನು ಮನವೊಲಿಸಿ ತ್ಯಾಜ್ಯ ವಿಲೇವಾರಿಯನ್ನು ಸುಗಮಗೊಳಿಸಲಾಗಿದೆ. ಬಹುತೇಕ ಪ್ರದೇಶಗಳಲ್ಲಿ ವಿಲೇವಾರಿಯಾಗದೇ ಇರುವ ತ್ಯಾಜ್ಯವನ್ನು ತೆರವುಗೊಳಿಸಿ ತೆರೆದ ಜಾಗೆಯೇ ಬ್ಲೀಚಿಂಗ್ ಪೌಡರ್‌ನ್ನು ಸಹ ಸಿಂಪಡಿಸಿ ಸ್ವಚ್ಛತೆಯನ್ನು ಕಾಪಾಡಲಾಗುತ್ತಿದೆ. ಹಾಗೂ ದೈನಂದಿನ ತ್ಯಾಜ್ಯವನ್ನು ದಿನದ ದಿನವೇ ವಿಲೇವಾರಿ ಮಾಡಿಸಲು ಕ್ರಮವಹಿಸಲಾಗಿದೆ. ಬಾಕಿ ಉಳಿದಿರುವ ಪ್ರದೇಶಗಳಲ್ಲಿ ತ್ಯಾಜ್ಯ ವಿಲೇವಾರಿಯನ್ನು ಪ್ರಗತಿಯಲ್ಲಿರಿಸಲಾಗಿದ್ದು, ಅತೀ ಶೀಘ್ರದಲ್ಲಿ ವಿಲೇವಾರಿ ಮಾಡಲಾಗುವುದು.

ಕೈಗೊಂಡಿರುವ ಕ್ರಮಗಳನ್ನು

ಪಟ್ಟಣದಲ್ಲಿ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ.

- ಘನತ್ಯಾಜ್ಯದ ಸಮರ್ಪಕ ನಿರ್ವಹಣೆಗಾಗಿ ಎಲ್ಲಾ ವಲಯಗಳನ್ನು ಸಂಪೂರ್ಣ ಮಂತರಪಲ್ಲಿಯೇ ವಿಂಗಡಣೆ ಮಾಡಲು ಪ್ರೋತ್ಸಾಹಿಸುವುದು ಹಸಿ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಬಿ.ಬಿ.ಎಂ.ಪಿ.ಯಿಂದ ಸ್ಥಾಪಿಸಲಾಗಿದ್ದು, ಈ ಕೇಂದ್ರಗಳು ಕೇವಲ ಒಣತ್ಯಾಜ್ಯವನ್ನು ಮಾತ್ರ ವಾರ್ಡುಗಳಲ್ಲಿ ಸಂಗ್ರಹಿಸುತ್ತಿವೆ.
- ಬೃಹತ್ ಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದನೆ ಮಾಡುವ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಕಲ್ಯಾಣ ಮಂಟಪಗಳು ಹಾಗೂ ಅಪಾರ್ಟ್‌ಮೆಂಟ್‌ಗಳು ಒಂದು ವ್ಯವಸ್ಥೆಯನ್ನು ಮಾಡಿಕೊಂಡು ತಮ್ಮ ಹಂತದಲ್ಲಿಯೇ ಎಲ್ಲಾದ ನಿರ್ವಹಣೆ ಮಾಡಿಕೊಳ್ಳಲು ಅಥವಾ ಬಿ.ಬಿ.ಎಂ.ಪಿ.ಯಿಂದ ಗುರುತಿಸಲಾದ ಸರ್ವೀಸ್ ಪ್ರೊವೈಡರ್‌ಗಳಿಂದ ನಿರ್ವಹಿಸಿಕೊಳ್ಳಲು ಸೂಚನೆಗಳನ್ನು ನೀಡಲಾಗಿದೆ.
- ಕಟ್ಟಡ ಮತ್ತು ಭಗ್ನಾವಶೇಷ ತ್ಯಾಜ್ಯದ ವಿಲೇವಾರಿಗಾಗಿ 8 ಸ್ಥಳಗಳನ್ನು ಗುರುತಿಸಲಾಗಿದೆ.
- ಮಹಾನಗರ ಪಾಲಿಕೆಯ 13 ಸ್ಥಳಗಳಲ್ಲಿ ವಿಕೇಂದ್ರೀಕೃತ ಬಯೋ ಮಿಥನೇಷೇಷನ್ ಘಟಕಗಳನ್ನು ಸ್ಥಾಪಿಸಲಾಗಿದ್ದು, ಆ ಪೈಕಿ 12 ಘಟಕಗಳು ಕಾರ್ಯಾರಂಭಿಸಿವೆ.

ಈ ಎಲ್ಲಾ ಕ್ರಮಗಳಿಂದಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಂಸ್ಕರಣಾ ಘಟಕಗಳಿಗೆ ಬರುವ ತ್ಯಾಜ್ಯದ ಪ್ರಮಾಣ ಪ್ರಸ್ತುತ 3000 ಟನ್‌ಗೆ ಬಂದಿದೆ. ಈ ತ್ಯಾಜ್ಯವನ್ನು ಕೆಳಕಂಡ ಘಟಕಗಳ ಮೂಲಕ ಸಂಸ್ಕರಿಸಲಾಗುತ್ತಿದೆ:

1	ಮೆ॥ ಟೆರ್ರಾ-ಫಾರ್ಮಾ	1200 ಟನ್ ಪ್ರತಿ ದಿನ
2	ಮೆ॥ ಎಐ.ಎಸ್.ಬಿ.ಪಿ.	800 ಟನ್ ಪ್ರತಿ ದಿನ
3	ಬಿಂಗೀಪುರ	900 ಟನ್ ಪ್ರತಿ ದಿನ (ಹಾಲಿ ಸ್ಥಗಿತಗೊಂಡಿರುತ್ತದೆ)
4	ಕೆ.ಸಿ.ಡಿ.ಸಿ.	300 ಟನ್ ಪ್ರತಿ ದಿನ
5	ಮಾವಳ್ಳಿಪುರ	300 ಟನ್ ಪ್ರತಿ ದಿನ

ಮೇಲ್ಕಾಣಿಸಿದ ಘಟಕಗಳ ಪೈಕಿ ಬಿಂಗೀಪುರದಲ್ಲಿ ಮಾತ್ರ ಭೂಮಿಗೆ ಈ ಹಿಂದೆ ಸುರಿಯಲಾಗುತ್ತಿತ್ತು. ತ್ಯಾಜ್ಯದ ಸಂಪೂರ್ಣ ಸಂಸ್ಕರಣೆ ಮಾಡುವ ಉದ್ದೇಶದಿಂದ 7 ಘಟಕಗಳನ್ನು (6 ಹೊಸ ಘಟಕ ಹಾಗೂ 1 ಹಾಲಿ ಇರುವ ಘಟಕದ ವಿಸ್ತರಣೆ) ಸ್ಥಾಪಿಸಲು ಸರ್ಕಾರವು ಯೋಜನೆ ರೂಪಿಸಿದೆ. ಈ ಹೊಸ ಘಟಕಗಳನ್ನು ಈ ಕೆಳಕಾಣಿಸಿದ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ

1	ಕನ್ನಹಳ್ಳಿ	500 ಟನ್ ಪ್ರತಿ ದಿನ (ಹಾಲಿ ಘಟಕ ಸಾಮರ್ಥ್ಯ 150 ಟನ್ ಹೊಸ ಸ್ಥಾವರವನ್ನು ಸಂಸ್ಕರಿಸಲಾಗುತ್ತಿದೆ)
2	ಸೂಳೆಕೆರೆ	200 ಟನ್ ಪ್ರತಿ ದಿನ (ಹಾಲಿ ಇರುವ 25 ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ)

		ಸುಮಾರು 150 ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ)
4	ಲಿಂಗಧೀರನಹಳ್ಳಿ	200 ಟನ್ ಪ್ರತಿ ದಿನ (ಹಸಿರು ನ್ಯಾಯಾಧಿಕರಣದಿಂದ (ಎನ್‌ಜಿಟಿ) ತಡೆಯಾಜ್ಞೆ ಇರುತ್ತದೆ.
5	ಸುಬ್ಬರಾಂಯನಪಾಳ್ಯ	200 ಟನ್ ಪ್ರತಿ ದಿನ (ಹಾಲಿ ಸುಮಾರು 30 ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ)
6	ಚಿಕ್ಕನಾಗಮಂಗಲ	500 ಟನ್ ಪ್ರತಿ ದಿನ (ಹಾಲಿ ಸುಮಾರು 40 ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ)
7	ಕೆಸಿಡಿಸಿ (ಹಾಲಿ ಘಟಕದ ವಿಸ್ತರಣೆ)	800 ಟನ್ ಪ್ರತಿ ದಿನ (ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಪ್ರತಿದಿನ 300 ಟನ್ ಸಂಸ್ಕರಿಸಲಾಗುತ್ತಿದೆ)
ಒಟ್ಟು		2300 ಟನ್ ಪ್ರತಿ ದಿನ

ಮುಂದಿನ ದಿನಗಳಲ್ಲಿ ಈ ಘಟಕಗಳು (ಲಿಂಗಧೀರನಹಳ್ಳಿ ಘಟಕ ಹೊರತುಪಡಿಸಿ) ಪೂರ್ಣ ಪ್ರಮಾಣದಲ್ಲಿ ಸಂಸ್ಕರಣೆ ಮಾಡುವ ಗುರಿ ಹೊಂದಲಾಗಿದೆ. ಇದರೊಂದಿಗೆ ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ ಸಂಪೂರ್ಣ ಪ್ರಮಾಣವ ಸಂಸ್ಕರಣೆ ಮಾಡಬಹುದಾಗಿದೆ ಹೋಟೆಲ್ ಉದ್ಯಮದಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಂಸ್ಕರಿಸಲು ಪ್ರತಿದಿನ 120 ಟನ್ ಸಾಮರ್ಥ್ಯದ ಘಟಕವನ್ನು ಕನ್ನಹಳ್ಳಿ ಪ್ರದೇಶದಲ್ಲಿ ಸ್ಥಾಪಿಸಲಾಗಿದ್ದು, ಹಂತ ಹಂತವಾಗಿ ಇನ್ನು 4 ತಿಂಗಳುಗಳಲ್ಲಿ ಸದರಿ ಘಟಕವು ಪೂರ್ಣ ಪ್ರಮಾಣದಲ್ಲಿ ತ್ಯಾಜ್ಯ ಸಂಸ್ಕರಣೆ ಮಾಡಲಿದೆ.

ಇದಲ್ಲದೇ ಖಾಸಗಿ ಸಹಭಾಗಿತ್ವದಲ್ಲಿ ಈ ಕೆಳಕಾಣಿಸಿದ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲು ಪ್ರಮಂಜೂರಾತಿ ನೀಡಲಾಗಿದೆ.

1	ಮೆ॥ ಸತಾರೆಂ ಎಂಟರ್‌ಪ್ರೈಸಸ್-	1000 ಟನ್ ಪ್ರತಿ ದಿನ
2	ಮೆ॥ ಆರ್‌ಗ್ಯಾನಿಕ್ ವೇಸ್ಟ್ ಇಂಡಿಯಾ	600 ಟನ್ ಪ್ರತಿ ದಿನ
3	ಮೆ॥ ಎಸ್‌ಎಲ್ ಗ್ರೂಪ್	600 ಟನ್ ಪ್ರತಿ ದಿನ
ಒಟ್ಟು		2200 ಟನ್ ಪ್ರತಿ ದಿನ

ಈ ಖಾಸಗಿ ಸಹಭಾಗಿತ್ವದ ಘಟಕಗಳು ಕನಿಷ್ಠ ಪಕ್ಷ ಮುಂದಿನ 2 ವರ್ಷಗಳಲ್ಲಿ ಕಾರ್ಯಾರಂಭಿಸಲಿವೆ. ಈ ಎಲ್ಲಾ ಘಟಕಗಳು ಸಂಪೂರ್ಣವಾಗಿ ಕಾರ್ಯಾರಂಭಿಸಿದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ 150% ಸಂಸ್ಕರಿಸುವ ಸಾಮರ್ಥ್ಯವನ್ನು ಹೊಂದಬಹುದಾಗಿದೆ.

ಇದಲ್ಲದೆ, ಸರ್ಕಾರವು ನೆದರ್‌ಲ್ಯಾಂಡ್ ಸರ್ಕಾರದೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಸಹಯೋಗಕ್ಕಾಗಿ ಒಡಂಬಡಿಕೆ ಮಾಡಿಕೊಂಡಿದ್ದು, ಅದರಡಿಯಲ್ಲಿ ನೆದರ್‌ಲ್ಯಾಂಡ್ ಮೂಲದ ವೇಸ್ಟ್-ಟು-ವ್ಯಾಲ್ಯೂ ಸಮೂಹದ ಮೆ॥ ನಕ್ಷನ್ ಸೋವ್ಸ್ ಸಂಸ್ಥೆಯವರು ಪಾಲಿಕೆಯ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ (ವೇಸ್ಟ್-ಟು-ಎನರ್ಜಿ) ಪ್ರತಿದಿನ 600 ಟನ್ ಸಾಮರ್ಥ್ಯದ ಪ್ರಾಯೋಗಿಕ ಘಟಕ ಸ್ಥಾಪನೆಗೆ ಮುಂದೆ ಬಂದಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

		ನಗರ ಸ್ವಚ್ಛತೆ ಮತ್ತು ತ್ಯಾಜ್ಯ ನಿರ್ವಹಣೆಯಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಯಾವುದೇ ದುಷ್ಪರಿಣಾಮ ಬೀರದಂತೆ, ಎಲ್ಲಾ ಬಗೆಯ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಬಹುಪಾಲು ತ್ಯಾಜ್ಯವನ್ನು ಮರುಬಳಕೆಗೆ ಉಪಯೋಗಿಸಿಕೊಳ್ಳಲು ತ್ಯಾಜ್ಯವನ್ನು ಬೇರ್ಪಡಿಸಿದ ರೀತಿಯಲ್ಲಿಯೇ ಸಂಗ್ರಹಿಸಿ, ಸಾಗಿಸಿ, ಸಂಸ್ಕರಿಸಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲು ಹೊಸದಾಗಿ ಟೆಂಡರ್ ನಿಯಮಗಳನ್ನು ಮಾರ್ಪಡಿಸಲಾಗಿದ್ದು, ಈಗಾಗಲೇ 95 ವಾರ್ಡ್‌ಗಳಿಗೆ ಹೊಸ ನಿಯಮಾವಳಿಗಳಂತೆ ಟೆಂಡರ್ ಕರೆಯಲಾಗಿರುತ್ತದೆ. ಬಾಕಿ 103 ವಾರ್ಡ್‌ಗಳಿಗೂ ಸಹ ಟೆಂಡರ್ ಕರೆಯುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಅತೀ ಶೀಘ್ರವಾಗಿ ಟೆಂಡರ್ ಕರೆಯಲಾಗುವುದು. ಸದರಿ ಟೆಂಡರ್‌ನಲ್ಲಿ ಜಿ.ಪಿ.ಎಸ್ ತಂತ್ರಜ್ಞಾನದ ಮೂಲಕ ಹಾಗೂ ಬಯೋಮೆಟ್ರಿಕ್ ವಿಧಾನಗಳ ಮೂಲಕ ವಾಹನಗಳ ಹಾಗೂ ಕಾರ್ಮಿಕರ ಹಾಜರಾತಿಯನ್ನು ದೃಢೀಕರಿಸಿಕೊಳ್ಳುವ ಸಾಧನಗಳಿದ್ದು, ತ್ಯಾಜ್ಯ ಬೇರ್ಪಡಿಸುವಿಕೆಯ ಸಾಮರ್ಥ್ಯದ ಆಧಾರದ ಮೇಲೆ ಬಿಲ್ ಸಂದಾಯ ಮಾಡುವ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಪೌರ ಘನತ್ಯಾಜ್ಯ ನಿಯಮ 2000 ಗಳಂತೆ ಬೇರ್ಪಡಿಸಿದ ತ್ಯಾಜ್ಯವನ್ನು ಪ್ರತ್ಯೇಕವಾಗಿ ಹಸಿ, ಒಣ ಮತ್ತು ಸ್ಯಾನಿಟರಿ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಸಾಗಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. 95 ವಾರ್ಡ್‌ಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಉಳಿದ ವಾರ್ಡ್‌ಗಳಿಗೆ ಟೆಂಡರ್ ಕರೆಯಲು ಪ್ರಕ್ರಿಯೆ ಜಾರಿಯಲ್ಲಿದೆ.
ಈ)	ರಾಜ್ಯದಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕಗಳು ಎಷ್ಟಿವೆ; ಅವುಗಳ ಸಾಮರ್ಥ್ಯವೆಷ್ಟು; ಆ ಪೈಕಿ ಎಷ್ಟು ಘಟಕಗಳು ಕಾರ್ಯನಿರ್ವಹಣೆಯಲ್ಲಿವೆ;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತ್ಯಾಜ್ಯ ಸಂಸ್ಕರಣಾ ಘಟಕಗಳ ವಿವರಗಳು ಕೆಳಕಂಡಂತಿದೆ:

ಕ್ರ ಸಂ.	ಘಟಕದ ಹೆಸರು	ಸಾಮರ್ಥ್ಯ	ಪ್ರಸ್ತುತ ಸ್ಥಿತಿ ವಿವರ
1	ಮೈ। ಟೆರ್ರಾ-ಫಾರ್ಮ್	1000 ಟನ್ ಪ್ರತಿ ದಿನ	ಹಾಲಿ 1200 ಟನ್ ತ್ಯಾಜ್ಯವನ್ನು ಸಾಗಿಸಲಾಗುತ್ತಿದೆ.
2	ಮೈ। ಎಂ.ಎಸ್.ಜಿ.ಪಿ.	750 ಟನ್ ಪ್ರತಿ ದಿನ	ಹಾಲಿ 800 ಟನ್ ತ್ಯಾಜ್ಯವನ್ನು ಸಾಗಿಸಲಾಗುತ್ತಿದೆ.
3	ಕೆಪಿಡಿಸಿ (ಹಾಲಿ ಘಟಕದ ವಿಸ್ತರಣೆ)	800 ಟನ್ ಪ್ರತಿ ದಿನ	ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಪ್ರತಿದಿನ 300 ಟನ್ ಸಂಸ್ಕರಿಸಲಾಗುತ್ತಿದೆ.
4	ಮಾವಳ್ಳಿಪುರ	300 ಟನ್ ಪ್ರತಿ ದಿನ	ಹಾಲಿ 300 ಟನ್ ತ್ಯಾಜ್ಯವನ್ನು ಸಾಗಿಸಲಾಗುತ್ತಿದೆ.
5	ಕೆನ್ನಹಳ್ಳಿ	500 ಟನ್ ಪ್ರತಿ ದಿನ	ಹಾಲಿ ಸುಮಾರು 160 ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ
6	ಸೀಗೆಹಳ್ಳಿ	200 ಟನ್ ಪ್ರತಿ ದಿನ	ಹಾಲಿ ಸುಮಾರು 25 ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ

		ಇನ್ನುಳಿದಂತೆ ರಾಜ್ಯದ 129 ವಿವಿಧ ಪ್ರದೇಶಗಳಲ್ಲಿ ಸುಮಾರು 1400 ಬಿನ್‌ಗಳನ್ನು ತ್ಯಾಜ್ಯ ಸಂಸ್ಕರಣಾ ಸೌಲಭ್ಯಗಳನ್ನು ಸ್ಥಾಪಿಸಲಾಗಿದ್ದು ಕಾರ್ಯಾಚರಣೆಯಲ್ಲಿರುತ್ತವೆ.
ಗ)	ಕಸವನ್ನು ಸಂಗ್ರಹಣೆ ಮಾಡಿ, ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡದಿರುವುದರಿಂದ ಸುತ್ತಮುತ್ತಲು ವಾಸಿಸುತ್ತಿರುವ ಜನರಿಗೆ ಅನಾನುಕೂಲ ವಾಗುತ್ತಿರುವುದು ನಿಜವಲ್ಲವೆ; ಹಾಗಿದ್ದರೆ, ಈ ತ್ಯಾಜ್ಯವನ್ನು ಯಾವ ಯಾವ ರೀತಿ ಸಂಸ್ಕರಣೆ ಮಾಡಿ ಮರುಬಳಕೆ ಮಾಡಲಾಗುತ್ತಿದೆ;	ಹೌದು. ತ್ಯಾಜ್ಯವನ್ನು ಈ ಕೆಳಕಂಡ ರೀತಿ ಸಂಸ್ಕರಣೆ ಮಾಡಿ ಮರುಬಳಕೆ ಮಾಡಲಾಗುತ್ತಿದೆ: ..... ➢ ಘನತ್ಯಾಜ್ಯದ ಪ್ರಮುಖ ಭಾಗವಾದ ಹಸಿ ತ್ಯಾಜ್ಯದಿಂದ ಗೊಬ್ಬರ ಮತ್ತು ಅನಿಲ ಉತ್ಪಾದಿಸಲಾಗುತ್ತಿದೆ..... ➢ ಸಂಗ್ರಹಿಸಲಾಗುತ್ತಿರುವ ಒಣತ್ಯಾಜ್ಯವನ್ನು ವಿವಿಧ ಬಗೆಯ ಉಪಯುಕ್ತ ಬಗೆಗಳನ್ನಾಗಿ ಭಿಂಗಡಿಸಿ ಮರುಬಳಕೆ ಮಾಡಲಾಗುತ್ತಿದೆ. ➢ ಇದಲ್ಲದೆ ಕಡಿಮೆ ಮಾದರಿಯ ಪ್ಲಾಸ್ಟಿಕ್ ತ್ಯಾಜ್ಯವನ್ನು ಭೇಲ್ ಮಾಡಲಾಗುತ್ತಿದ್ದು ಆರ್.ಡಿ.ಎಫ್. ಆಗಿ ಉಪಯೋಗಿಸಿಕೊಳ್ಳಲಾಗುವುದು. ➢ ವಿಶೇಷ ಬಗೆಯ ತ್ಯಾಜ್ಯಗಳಾದ ತೆಂಗಿನ ಚಿಪ್ಪು ಮತ್ತು ಕಬ್ಬಿನ ಜಲ್ಲೆಯಿಂದ ಇಂಧನದ ಪೆಲೆಟ್‌ಗಳನ್ನಾಗಿ ತಯಾರಿಸಿಕೊಳ್ಳಲಾಗುತ್ತಿದೆ.
ಘ)	ಇತ್ತೀಚಿಗೆ ದೊಡ್ಡಬಳ್ಳಾಪುರದ ಟೆಸ್ಸಾಪರ್ಮಾ ಹಾಗೂ ಎಂ.ಎಸ್.ಜಿ.ಪಿ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಕಸ ಸುರಿಯುವಂತೆ ಸ್ಥಳೀಯರು ಪ್ರತಿಭಟನೆ ನಡೆಸಲು ಕಾರಣವೇನು; ಇದಕ್ಕೆ ಸರ್ಕಾರ ಯಾವ ರೀತಿಯ ಪರಿಹಾರೋಪಾಯಗಳನ್ನು ಕಂಡುಕೊಂಡಿದೆ;	ಇತ್ತೀಚಿಗೆ ದೊಡ್ಡಬಳ್ಳಾಪುರದ ಟೆಸ್ಸಾಪರ್ಮಾ ಹಾಗೂ ಎಂ.ಎಸ್.ಜಿ.ಪಿ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ತ್ಯಾಜ್ಯ ಸಾಗಾಣಿಕೆಗೆ ಸ್ಥಳೀಯರು ಈ ಕೆಳಕಂಡ ಪ್ರಮುಖ ಆಂತಗಳಿಗೆ ಸಂಬಂಧಿಸಿದಂತೆ ಪ್ರತಿಭಟನೆ ನಡೆಸಿರುತ್ತಾರೆ. 1) ತ್ಯಾಜ್ಯ ಸಾಗಾಣಿಕೆ ವಾಹನಗಳ ದಟ್ಟಣೆ. 2) ತ್ಯಾಜ್ಯ ವಿಲೇವಾರಿಯಿಂದ ಹೆಚ್ಚಾಗುತ್ತಿರುವ ವಾಸನೆ, ನೊಣಗಳ ಹಾವಳಿ. 3) ತ್ಯಾಜ್ಯದ ಅಸಮರ್ಪಕ ಸಂಸ್ಕರಣೆಯಿಂದ ಅಂತರ್ಜಲ ಕಲುಷಿತ ವಾಗುತ್ತಿರುವ ಬಗ್ಗೆ. 4) ಸಂಸ್ಕರಣಾ ಸಾಮರ್ಥ್ಯಕ್ಕಿಂತ ಹೆಚ್ಚಿನ ತ್ಯಾಜ್ಯ ಸಾಗಾಣಿಕೆ. 5) ತ್ಯಾಜ್ಯವನ್ನು ದೈನಂದಿನವಾಗಿ ಪೂರ್ಣಪ್ರಮಾಣದಲ್ಲಿ ಸಂಸ್ಕರಿಸದೆ ಇರುವುದು. ಪ್ರಸ್ತುತ ಘಟಕಗಳಲ್ಲಿನ ಸುತ್ತಮುತ್ತಲಿನ ಸಾರ್ವಜನಿಕರನ್ನು ಮನವೊಲಿಸಿ ತ್ಯಾಜ್ಯ ವಿಲೇವಾರಿಯನ್ನು ಸುಗಮಗೊಳಿಸಲಾಗಿದೆ. ಘಟಕಗಳಲ್ಲಿ ಸಾಗಿಸುತ್ತಿರುವ ತ್ಯಾಜ್ಯದ ಪ್ರಮಾಣವನ್ನು ಕ್ರಮೇಣವಾಗಿ ಸಂಸ್ಕರಣಾ ಸಾಮರ್ಥ್ಯಕ್ಕೆ ಕಡಿಮೆಗೊಳಿಸಲು ಹಾಗೂ ಆಯಾ ಘಟಕಗಳು ತಮ್ಮ ತ್ಯಾಜ್ಯ ಸಂಸ್ಕರಣಾ ಸಾಮರ್ಥ್ಯದ ಅನುಸಾರವಾಗಿ ಸಂಸ್ಕರಣಾ ಕಾರ್ಯವನ್ನು ದೈನಂದಿನವಾಗಿ ಕೈಗೊಳ್ಳುವಂತೆ ಕ್ರಮವಹಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಮೇಲೆ ತಿಳಿಸಿರುವಂತೆ ಹೊಸ ಘಟಕಗಳು ಸಂಸ್ಕರಣಾ ಸಾಮರ್ಥ್ಯದ ಅನುಸಾರವಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಕ್ರಮ ಜರುಗಿಸಲಾಗುತ್ತಿದೆ. ಇದಲ್ಲದೆ ಪಾಲಿ ಕಾರ್ಯನಿರ್ವಹಿಸುತ್ತಿರುವ ವಿಕೇಂದ್ರೀಕೃತ ಘಟಕಗಳ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ. ಈ ಮೇಲ್ಕಂಡ ಕಾರ್ಯಗಳಿಗೆ ಪೂರಕ ವಾಗುವಂತೆ ಮೂಲದಲ್ಲಿಯೆ ತ್ಯಾಜ್ಯ ವಿಂಗಡಣೆ ಕಾರ್ಯಕ್ಕೆ ಒತ್ತು ನೀಡಲಾಗುತ್ತಿದೆ. ಎಲ್ಲಾ ಬಗೆಯ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ

		ಇವನ್ನು ಬಿಜಿಎಸ್ಎಸ್ ಸ್ವಾಧೀನಪಡಿಸಿಕೊಳ್ಳಲು ಬಂಗಳೂರು ಮಹಾನಗರ ಪಾಲಿಕೆಯು ಸ್ವಾಧೀನಪಡಿಸಿಕೊಳ್ಳಲು ಕ್ರಮವಹಿಸಲಾಗಿದೆ. ಸಾಗಿಸಿ ಸಂಸ್ಕರಿಸಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲು ಹೊಸದಾಗಿ ಟೆಂಡರ್ ನಿಯಮಗಳನ್ನು ರೂಪಿಸಲಾಗಿದ್ದು, ಈಗಾಗಲೇ 95 ವಾರ್ಡ್‌ಗಳಿಗೆ ಹೊಸ ನಿಯಮಾವಳಿಗಳಂತೆ ಟೆಂಡರ್ ಕರೆಯಲಾಗಿರುತ್ತದೆ. ಬಾಕಿ 103 ವಾರ್ಡ್‌ಗಳಿಗೂ ಸಹ ಟೆಂಡರ್ ಕರೆಯುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.
ಋ)	ಹಸಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಎಷ್ಟು ಘಟಕಗಳನ್ನು ಸ್ಥಾಪಿಸಲಾಗಿದೆ?	ಹಸಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸಲು ಈಗಾಗಲೇ 12 ವಿಕೇಂದ್ರೀಕೃತ ಬಯೋಮಿಥನೇಷನ್ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದ್ದು, 12 ಘಟಕಗಳು ಕಾರ್ಯನಿರ್ವಹಿಸುತ್ತಿರುತ್ತವೆ.

ಸಂಖ್ಯೆ: ನಅಇ 770 ಎಂಎನ್‌ವೈ 2015

(ಕೆ.ಜಿ.ಜಾಜ್)
ಬೆಂಗಳೂರು ನಗರಾಭಿವೃದ್ಧಿ ಮತ್ತು 25/11/15
ನಗರ ಯೋಜನಾ ಸಚಿವರು

ಅನುಬಂಧ - 2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು ೦೭

ಸಂಖ್ಯೆ: ಆ.ಪ್ರ.ಶಾ/ಪ.ಆರ್/೫೫೪೪/೨೦೧೭-೧೮ ದಿನಾಂಕ: 19-03-2018

ರವರಿಗೆ,

ನಗರದ ಅಪರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
4ನೇ ಮಹಡಿ, ವಿಕಾಸಸೌಧ,
ಅಂಬೇಡ್ಕರ್ ವೀಧಿ,
ಬೆಂಗಳೂರು

ಮಾನ್ಯರೇ,

ವಿಷಯ: ವಿಧಾನ ಪರಿಷತ್ತಿನ ಭರವಸೆ ಸಂಖ್ಯೆ: ೮೩೬೬/೨೦೧೭ರ ಉತ್ತರ ನೀಡುವ ಬಗ್ಗೆ.

ಉಲ್ಲೇಖ: 1. ದಿ: 04-10-೨೦೧೭ರಂದು ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಯ ನಡವಳಿಗಳು

2. ದಿ: 19-12-2017 ರಂದು ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಯ ನಡವಳಿಗಳು.

3. ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಪತ್ರ ಸಂಖ್ಯೆ: ನ.ಇ/524/ಎಂ.ಎಸ್.ಡಬ್ಲ್ಯೂ/2017, ದಿ: 14-04-2018.

4. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ರವರ ಪತ್ರ ಸಂಖ್ಯೆ: ಕ.ವಿ.ಪೀಠ/ಪ/೨೮/ನಳ/೨೦೧೭, ದಿನಾಂಕ: 12-03-2018.

****

ವಿಧಾನ ಪರಿಷತ್ತಿನ ಭರವಸೆ ಸಂಖ್ಯೆ: ೮೩೬೬/೨೦೧೭ ರ ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ತ್ಯಾಜ್ಯದ ಸಂಪೂರ್ಣ ಕಾರ್ಯಕ್ಕೆ ಒತ್ತು ನೀಡುವ ಬಗ್ಗೆ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಮರುಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕ್ರಮಕೈಗೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ ಪತ್ರಗಳನ್ವಯ ಕೈಗೊಂಡಿದ್ದ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಲು ಕೋರಿರುವಂತೆ ಭರವಸೆ ಸಂಖ್ಯೆ: ೮೩೬೬/೨೦೧೭ ಕ್ಕೆ ಸಂಬಂಧಿಸಿದಂತೆ ಉಲ್ಲೇಖ (೧) ರನ್ವಯ ಕರ್ನಾಟಕ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯು ದಿ: ೦೪-೧೦-೨೦೧೭ ರಂದು ಪ್ರಾಯೋಗಿಕ ತ್ಯಾಜ್ಯ ವಿಲೇವಾರಿ ಘಟಕ ಸಂಸ್ಥರಣಾ ಘಟಕಕ್ಕೆ ಭೇಟಿ ನೀಡಿ ನ್ಯೂನ ಬಯೋಮಿನೆ ನಡೆಸಿ ಪರಿಶೀಲಿಸಿರುವಂತೆ ಬಿ.ಬಿ.ಎಂ.ಪಿ ಕಾರ್ಯಾದೇಶ ಮೆ|| ಎಸ್.ಜಿ.ಬಿ.ಆರ್ ಎಸ್ ಗುತ್ತಿಗೆದಾರರು ಮುಖ್ಯ ಒಪ್ಪಂದಾವಧಿ ಪೂರ್ಣ ಸಿಂಗಲ್ ತ್ಯಾಜ್ಯ ಬದಲು ಟ್ವಿನ್ ತ್ಯಾಜ್ಯ ಪೂರೈಕೆಯಾಗುತ್ತಿದ್ದು, ಸಂಪೂರ್ಣ ಸಾಮರ್ಥ್ಯದಲ್ಲಿ ಘಟಕವನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ಮಾಹಿತಿ ನೀಡಿದ್ದರು. ಸಂಪೂರ್ಣ ಪ್ರಮಾಣದ ತ್ಯಾಜ್ಯ ಪೂರೈಕೆಯಾಗುತ್ತಾ ಬಂದಾಗ ಬಿ.ಬಿ.ಎಂ.ಪಿ ಮತ್ತು ಗುತ್ತಿಗೆದಾರರು ಒಂದು ಒಪ್ಪಂದ ಮಾಡಿಕೊಂಡು ತ್ಯಾಜ್ಯವಿಂಗಡಣೆ ಪೂರ್ಣ ಜವಾಬ್ದಾರಿಯನ್ನು ಕಂಪನಿಯವರೇ ನಿರ್ವಹಣೆ ಮಾಡುವಂತೆ ಈ ಘಟಕವನ್ನು ಹಸ್ತಾಂತರಿಸಿದ್ದು ಸದರಿ ಘಟಕಕ್ಕೆ ರೂ 7೫.೦೦ ಕೋಟಿ ರಷ್ಟು ಖರ್ಚಾಗಿದ್ದು, ಇದೆ ಪೈಕಿ ಫಲಿತಾಂಶದ ಬಜೆಟ್‌ನಲ್ಲಿ ರೂ 19.೨೦ ಕೋಟಿ, ಕೆಸಿಸಿಯಿಂದ ರೂ 19.೦೦ ಕೋಟಿ, ಎ.ಎಫ್.ಡಿ.ಬಿ ನಿಂದ ರೂ 14.೦೦ ಮೊತ್ತ ಮತ್ತು ಗುತ್ತಿಗೆದಾರರಾದ ಮೆ|| ಎಸ್.ಜಿ.ಆರ್.ಆರ್.ಎಲ್ ರವರು ರೂ. 17 ಲಕ್ಷ ಕೋಟಿ ಹೂಡಿಕೆ ಮಾಡಿರುತ್ತಾರೆ. ಈ ಸಂಬಂಧ ತನ್ನ ಬರವಣಿಗೆ ಮೂಲಕ ಸಂಪೂರ್ಣ ಸಹಕಾರವನ್ನು ಮಾಡುವುದಾಗಿ ತಿಳಿಸಿದ್ದಾರೆ. ಕೆ.ಎ ಮಾಲಿನ್ಯ ನಿಯಂತ್ರಣ ಮಂಡಳಿಯು ಸಹ ಘಟಕಕ್ಕೆ ಜನ ಪರಿಸರ ಅನುಮತಿ ನೀಡಿದ್ದು ಸದರಿ ಘಟಕದ ಸಾಮರ್ಥ್ಯ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸಹ ಪರಿಸರ ಅನುಮತಿಯನ್ನು ಪಡೆಯಲಾಗಿದೆ. ಘಟಕಕ್ಕೆ ಸಂಪೂರ್ಣ ಪ್ರಮಾಣದ ತ್ಯಾಜ್ಯ ಪೂರೈಕೆಯಾಗುತ್ತಿರುವುದರಿಂದ ಸದರಿ ಘಟಕವು ಸಂಪೂರ್ಣ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕ ವಿಧಾನ ಪರಿಷತ್ತಿನ ಭರವಸೆಯ ಸಂಖ್ಯೆ: 5356/2013 ಕ್ಕೆ ಸಂಬಂಧಿಸಿದಂತೆ ಮಾಹಿತಿ—

ವಿಷಯ:	ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ತ್ಯಾಜ್ಯದ ವಿಂಗಡಣಾ ಕಾರ್ಯಕ್ಕೆ ಒತ್ತು ನೀಡುವ ಬಗ್ಗೆ ಹಾಗೂ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಮರು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕೈಗೊಳ್ಳುವ ಕುರಿತು.

- ಸರ್ಕಾರದ ಆದೇಶ ಸಂಖ್ಯೆ: ನಅಇ 248 ಎಂಎನ್‌ವೈ 2017, ದಿನಾಂಕ: 20-12-2007 ರಲ್ಲಿ ಶ್ರೀ ಶ್ರೀನಿವಾಸ ಗಾಯತ್ರಿ ರಿಸೋರ್ಸಸ್ ರಿಕವರಿ ಪ್ರೈವೇಟ್ ಲಿಮಿಟೆಡ್ ಇವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ಸಂಸ್ಕರಣಾ ಘಟಕ ಸ್ಥಾಪನೆ ಹಾಗೂ ತ್ಯಾಜ್ಯ ವಸ್ತುಗಳಿಂದ ವಿದ್ಯುತ್ ಉತ್ಪಾದಿಸುವ ಬಗ್ಗೆ ಒಟ್ಟಾರೆ ಸುಮಾರು 59 ಎಕರೆ ಜಮೀನನ್ನು 33 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸರ್ಕಾರವು ಅನುಮೋದನೆ ನೀಡಿರುತ್ತದೆ.

- ಬಿಬಿಎಂಪಿ ಹಾಗೂ ಮೆ॥ ಎಸ್.ಜಿ.ಆರ್.ಆರ್.ಎಸ್. ಗುತ್ತಿಗೆದಾರರ ಮಧ್ಯೆ ಒಪ್ಪಂದವಾಗಿ ಪ್ರತಿದಿನ ತ್ಯಾಜ್ಯ 600 ಟನ್ ತ್ಯಜ್ಯ ಕೊಡಬೇಕಾಗಿದ್ದು, ಮೊದಮೊದಲು ಕಸದ ಪ್ರಮಾಣ ಇಷ್ಟೊಂದು ಬರುತ್ತಿಲ್ಲದೇ ಇರುವ ಕಾರಣ ಅದನ್ನು ಗೊಬ್ಬರ ಮಾಡಿ ಮಾರಾಟ ಮಾಡಲಾಗುತ್ತಿತ್ತು. ತ್ಯಾಜ್ಯದಿಂದ ಎಪಿಲ್ ಜನರೇಷನ್ ಪ್ಲಾಂಟ್ ಹಾಕಬೇಕೆಂದು ಒಪ್ಪಂದದಲ್ಲಿ ಕರಾರು ಮಾಡಿಕೊಂಡಿರುವಂತೆ ಸದರಿ ಸಂಸ್ಥೆಯವರು ಸರ್ಕಾರದಿಂದ ಗುತ್ತಿಗೆ ಆಧಾರದ ಮೇಲೆ ನೀಡಿರುವ ಜಮೀನನ್ನು ಅಡಮಾನ ಇಟ್ಟು ಇಂಡಿಯನ್ ಬ್ಯಾಂಕ್‌ನಿಂದ ರೂ. 19.75 ಕೋಟಿ, ಓರಿಯಂಟಲ್ ಬ್ಯಾಂಕ್‌ನಿಂದ ರೂ 19.00 ಕೋಟಿ, ಐ.ಎಫ್.ಸಿ.ಎಸ್. ನಿಂದ ರೂ.14.00 ಕೋಟಿ ಮತ್ತು ಗುತ್ತಿಗೆದಾರರಾದ ಮೆ॥ ಎಸ್.ಜಿ.ಆರ್.ಆರ್.ಎಲ್.ಇವರು ರೂ. 17.58 ಕೋಟಿ ಸಾಲವನ್ನು ಪಡೆದಿರುತ್ತಾರೆ.

- ಕರ್ನಾಟಕ ವಿಧಾನ ಪರಿಷತ್ತಿ ಭರವಸೆ ಸಮಿತಿಯು ದಿನಾಂಕ: 04-10-2012 ರಂದು ಮತ್ತು 19-12-2017 ರಂದು ತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿ ಇಲಾಖಾ ಅಧಿಕಾರಿಗಳೊಂದಿಗೆ ಹಾಗೂ ಮೆ॥ ಶ್ರೀನಿವಾಸ್ ಗಾಯತ್ರಿ ಸಂಸ್ಥೆಯೊಡನೆ ವಾಸ್ತವಾಂಶಗಳ ಬಗ್ಗೆ ಚರ್ಚಿಸಿ ಮಹಾನಗರ ಪಾಲಿಕೆಯ ವತಿಯಿಂದ ಲೋಪವಾಗಿದ್ದು ಈ ಬಗ್ಗೆ ಮಹಾನಗರ ಪಾಲಿಕೆಯಿಂದ ಮಾಹಿತಿ ಪಡೆದು ವರದಿಯನ್ನು ಸಲ್ಲಿಸುವಂತೆ ದಿನಾಂಕ: 12-03-2018 ರ ಪತ್ರದಲ್ಲಿ ತಿಳಿಸಿರುತ್ತಾರೆ.

- ಈ ಬಗ್ಗೆ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಂದ ಪೂರ್ಣ ಮಾಹಿತಿ ಪಡೆಯಲಾಗಿದ್ದು, ಅದರ ಪೂರ್ಣ ವಿವರವನ್ನು ಅನುಬಂಧ-1 ರಲ್ಲಿ ಮಾಹಿತಿಗಾಗಿ ಲಗತ್ತಿಸಲಾಗಿದೆ.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ತ್ಯಾಜ್ಯದಿಂದ ಇಂಧನ ಯೋಜನೆಗೆ ಸಂಬಂಧಿಸಿದಂತೆ 2014-15ನೇ ಸಾಲಿನ ಲೆಕ್ಕ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರ ವರದಿ ಸಂಖ್ಯೆ: 1 ಕಂಡಿಕೆ-3.13.9ರ ಬಗ್ಗೆ ದಿನಾಂಕ: 16-05-2017 ರಂದು ಸಾರ್ವಜನಿಕ ಉದ್ದಿಮೆಗಳ ಸಮಿತಿಯು ಸಭೆಯು ನಡೆದಿದ್ದು, ಅದರ ಪೂರ್ಣ ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

- ಆದ್ದರಿಂದ, ದಿನಾಂಕ: 16-05-2017 ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಸೂಚನೆ/ಶಿಫಾರಸ್ಸಿನನ್ವಯ ಹಾಗೂ ಭರವಸೆ ಸಮಿತಿಯು ಪ್ರಸ್ತಾಪಿಸಿರುವ ವಿಷಯವಸ್ತುವನ್ನು ಗಣನೆಗೆ ತೆಗೆದುಕೊಂಡು ಸದರಿ ವಿಷಯದಲ್ಲಿ ಒಂದು ಸಮಗ್ರ ಯೋಜನೆಯನ್ನು ರೂಪಿಸಿ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತ ಅಧಿಕಾರಿಗಳೊಳಗೊಂಡಂತೆ ಸಭೆಯನ್ನು ನಡೆಸಿ, ಸೂಕ್ತ ಕ್ರಮ ತೆಗೆದುಕೊಂಡು ಭರವಸೆ ಸಮಿತಿಗೆ ಸ್ಪಷ್ಟ ಮಾಹಿತಿಯನ್ನು ಒದಗಿಸಲಾಗುವುದು.

* * * * *

ಪ್ರ-1

ಕರ್ನಾಟಕ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಗೆ ಉತ್ತರ ನೀಡುವ ಬಗ್ಗೆ.

ಪ್ರಶ್ನೆ ಸಂಖ್ಯೆ	ಕೇಳಲಾದ ಮಾಹಿತಿ	ಮಾಹಿತಿ
5356	ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ತ್ಯಾಜ್ಯದ ವಿಂಗಡಣಾ ಕಾರ್ಯಕ್ಕೆ ಒತ್ತು ನೀಡುವ ಬಗ್ಗೆ ಹಾಗೂ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಪುರು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಕೈಗೊಂಡ ಪರಿಹಾರ ಕ್ರಮಗಳ ಕುರಿತು.	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರದೇಶದಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದ್ದು, ವಿವರ ಈ ಕೆಳಗಿನಂತಿದೆ. • ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ಸುಮಾರು 1ಂ ಲಕ್ಷ ಜನ ನಮ್ಮೆಯಿದ್ದು , ಸರಾಸರಿ ಪ್ರತಿ ದಿನ ಪ್ರತಿ ವ್ಯಕ್ತಿಗೆ ತ್ಯಾಜ್ಯ ಉತ್ಪಾದನೆ 0.1 ರಿಂದ 0.6 ಕೆಜಿಯಂತೆ ಸರಿಗಣಿಸಿದಾಗ ಪ್ರಸಿವಿನ ಸುಮಾರು 4200 ಮೆಟ್ರಿಕ್ ಟನ್‌ಗಳಷ್ಟು ತ್ಯಾಜ್ಯವನ್ನು ಉತ್ಪಾದಿಸುತ್ತಿದ್ದು, ಈ ತ್ಯಾಜ್ಯದ ಸಂಗ್ರಹಣೆ, ವಿಂಗಡಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿಯನ್ನು ಪಾಲಿಕೆಯು ಮರ್ಪಕವಾಗಿ ನಿರ್ವಹಿಸಲು 2016ರ ಅಡಿಯಲ್ಲಿ ಸಂಸ್ಕರಣಾ ಪ್ಲಾಸ್ಟಿಕ್ ತ್ಯಾಜ್ಯ (ನಿರ್ವಹಣಾ ಮತ್ತು ನಿಯಂತ್ರಣ) ತಿದ್ದುಪಡಿ ನಿಯಮಗಳು 2021 ಮತ್ತು ಘನ ತ್ಯಾಜ್ಯ ನಿರ್ವಹಣಾ ನಿಯಮಗಳು 2016ರ ಅಡಿಯಲ್ಲಿ ಸೂಕ್ತ ಕ್ರಮ ವಹಿಸಲಾಗುತ್ತಿದೆ. • ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ತ್ಯಾಜ್ಯ ನಿರ್ವಹಣೆಯನ್ನು <u>ಕ್ಲೀನ್ ಬೆಂಗಳೂರು</u>" ಎಂಬ ಶೀರ್ಷಿಕೆಯಡಿ ನಿರ್ವಹಿಸುತ್ತಿದ್ದು, ತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಿ ಸಂಗ್ರಹಿಸುವ ಕಾರ್ಯಕ್ಕೆ ಒತ್ತು ನೀಡಲಾಗಿರುವುದರಿಂದ ಆಯಾ ವಾರ್ಡ್‌ನ ತ್ಯಾಜ್ಯವನ್ನು ಆಯಾ ವಾರ್ಡ್‌ನಲ್ಲಿಯೇ ವಿಲೇವಾರಿಯಾಗುವ ಮತ್ತು ಘನತ್ಯಾಜ್ಯದ ಪ್ರಮಾಣವನ್ನು ಸಾಧ್ಯವಾದಷ್ಟು ಕಡಿಮೆಗೊಳಿಸುವ ನಿಟ್ಟಿನಲ್ಲಿ ಪಾಲಿಕೆಯ ಪೌರಕಾರ್ಮಿಕರು ತ್ಯಾಜ್ಯ (ಕೈಗಾಡಿ ಸೌಕರ್ಯ). ಒದಗಿಸಿದ್ದಾರೆ. ಇದಕ್ಕಾಗಿಯೇ 111 ವಾರ್ಡ್‌ಗಳಲ್ಲಿ ಮೀಸಲಿಸಿದ ಮಾಹಿತಿಯಲ್ಲಿ ತ್ಯಾಜ್ಯ ಸಂಗ್ರಹಣೆ ಪ್ರಮಾಣ ಸುಮಾರು 1:-02 2017ರಿಂದ ದಾಖಲಾಗಿ ಹೆಚ್ಚಳವಾಗಿರುತ್ತದೆ. • ಘನತ್ಯಾಜ್ಯ ನಿರ್ವಹಣೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಸುಲಭವಾಗಿ ಲಾಭದಾಯಕ ಪ್ರತ್ಯೇಕೀಕರಿಸಿ <u>ಘನತ್ಯಾಜ್ಯ ನಿರ್ವಹಣಾ ಕೋಶ್ಠಗಳನ್ನು</u> ಸ್ಥಾಪಿಸಲಾಗಿದ್ದು, ಕೆಲವು ಕಾರಣ ಬದಲಾವಣೆ ನಿಮಿತ್ತ ಮತ್ತೆಮರಳಿ ಘನತ್ಯಾಜ್ಯ ನಿರ್ವಹಣೆಗಾಗಿಯೇ ಪ್ರತ್ಯೇಕ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ವಿಭಾಗ ಮಟ್ಟದಲ್ಲಿ ಅರಿಯಾಸಂಯೋಜಕರು ಪರಿವೀಕ್ಷಕರು, ಸಹಾಯಕ/ಪರಿಸರ ಅಭಿಯಂತರರು, ಮಧ್ಯಮಟ್ಟದ ಆಡಳಿತಾತ್ಮಕ ಅಭಿಯಂತರರು, ಕಂಬಂಧ ಮಟ್ಟದಲ್ಲಿ ಉಪಕ್ಷೇತ್ರ ಅಭಿಯಂತರರು, ಸಹಾಯಕ ಕಂದಾಯ ಅಧಿಕಾರಿ, ಕಾರ್ಯ ಪಾಲಕ ಅಭಿಯಂತರರು, ಮುಖ್ಯ ಅಭಿಯಂತರರು, ಜಂಟಿ ಆಯುಕ್ತರುಗಳಿಗೆ ಮತ್ತು ಸಹಾಯಕ್ಕೆ

ಸೂಚನೆಗಳು :

ಪ್ರತಿ ಪ್ರಶ್ನೆಗಳಲ್ಲಿ ಒಂದು ಸರಿಯಾದ ಉತ್ತರವಿದೆ. ಉತ್ತರ ಸೂಚಿಸಿದ ಪ್ರಶ್ನೆಯ ಕ್ರಮಸಂಖ್ಯೆಯ ಮುಂದಿನ ಬ್ರಾಕೆಟ್‌ನಲ್ಲಿ ಸರಿಯಾದ ಉತ್ತರದ ಅಕ್ಷರವನ್ನು ಬರೆಯಿರಿ.

ಪ್ರತಿ ಪ್ರಶ್ನೆಗೆ ಸರಿಯಾದ ಉತ್ತರಕ್ಕೆ 1 ಅಂಕದಂತೆ ಒಟ್ಟು 100 ಅಂಕಗಳಿಗೆ ಪರೀಕ್ಷೆ ನಡೆಯುವುದು.

ಪ್ರಶ್ನೆ ಸಂಖ್ಯೆ 1 ರಿಂದ 100 ರವರೆಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಕೃಷಿ ಪದವಿಧರರು :

(A) ಸಂಪೂರ್ಣವಾಗಿ ಮಾರಾಟ ಮಾಡಿಕೊಳ್ಳಲು ಪ್ರಯತ್ನಿಸಿದರು (B) ಸಂಪೂರ್ಣವಾಗಿ ಮಾರಾಟ ಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ

(C) ಸಂಪೂರ್ಣವಾಗಿ ಕೃಷಿ ಚಟುವಟಿಕೆಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿದರು (D) ಮೇಲಿನ ಯಾವುದೂ ಅಲ್ಲ

ಪ್ರಶ್ನೆ 2 ಪ್ರಮಾಣದ ತಪ್ಪು ಉತ್ತರಗಳು (10) ಕ್ಕಿಂತ ಅಧಿಕ ಇದ್ದಲ್ಲಿ 50 ಪ್ರತಿಶತ ಅಧಿಕ ಅಂಕಗಳನ್ನು ಕಡಿತಗೊಳಿಸಲಾಗುವುದು)

ಕಾಲ್ಕಿಟ್ಟುಲೇಟರ್ ಮಾದರಿಯ ಸಣ್ಣ ಯಂತ್ರವನ್ನು ಪರೀಕ್ಷಾ ಸಭಾಂಗಣಕ್ಕೆ ತರಲು ಅನುಮತಿಸಲಾಗಿದೆ.

ಅಭ್ಯರ್ಥಿಯು ತನ್ನ ಪರೀಕ್ಷಾ ಪ್ರವೇಶ ಪತ್ರವನ್ನು ಕಡ್ಡಾಯವಾಗಿ ತರಬೇಕು.

ಪರೀಕ್ಷಾ ಕೇಂದ್ರಕ್ಕೆ ಮೊಬೈಲ್ ಫೋನ್ ಅಥವಾ ಇತರ ಯಾವುದೇ ಸಂವಹನ ಸಾಧನಗಳನ್ನು ತರಲು ಅನುಮತಿಸಲಾಗುವುದಿಲ್ಲ.

ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ಪತ್ರ ಮತ್ತು ಗುರುತಿನ ಚೀಟಿಯನ್ನು ತರಲು ಅಭ್ಯರ್ಥಿಗೆ ಸೂಚಿಸಲಾಗಿದೆ.

ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ಪತ್ರ ಮತ್ತು ಗುರುತಿನ ಚೀಟಿಯನ್ನು ತರಲು ಅಭ್ಯರ್ಥಿಗೆ ಸೂಚಿಸಲಾಗಿದೆ.

ಮಾಸ್ಟರ್ ಪ್ಲಾನ್ ಸಂಖ್ಯೆ: ಬಿಡಿಎ/ಎಸ್‌ಪಿಜಿ/ಎಂಪಿ/

ಎ) ಸ್ಥಳದ ಕೈಮರುಳುಪ್ಪಲ್ಲಿ ಸೂಚ್ಯ/ಸಾರ್ವಜನಿಕರ ಸಂಸ್ಥೆಗಳು
ಮಾಲೀಕತ್ವವುಳ್ಳ ಸಂಸ್ಥೆ ವಿತ್ತಾಲಯ ಪ್ರತಿಷ್ಠಾನ/ಸಂಸ್ಥೆಗಳು
ಕಾರ್ಯನಿರ್ವಹಣೆಯ ಸರಿಯ ಸಂಸ್ಥೆಗಳು ಸ್ಥಳ
ಅಂತಿಮ ಬಳಕೆಯ ಬಗ್ಗೆ ಸಮಸ್ಯೆಯಲ್ಲಿ ಸಮಸ್ಯೆಯಲ್ಲಿ ಕಾರ್ಯನಿರ್ವಹಣೆ
ಸಂಬಂಧಿಸಿದ ಕಾರ್ಯನಿರ್ವಹಣೆಯ ಸ್ಥಳ

ಬಿ) ಮಾಲೀಕರು ಅಧಿಕಾರಿಯ ಬಗ್ಗೆ ಸ್ಥಾನ, ಸ್ಥಾನಮಾನಗಳು
ಸ್ಥಳದ ಹೆಸರು ಸಂಸ್ಥೆಯ ನಿರ್ವಹಣೆಯ ಸ್ಥಳ
ಮಾಲೀಕತ್ವದ ಬಗ್ಗೆ ಮಾಹಿತಿ.

ಸಿ) ಮಾಲೀಕರು ಸಂಸ್ಥೆಯ ನಿರ್ವಹಣೆಯಲ್ಲಿ ಹೆಚ್ಚಿನ ಸಾರ್ವಜನಿಕರು
ಅಭಿವೃದ್ಧಿ Bangalore Metropolitan ಮಾಲೀಕತ್ವ
ಮಾರಾಟಗಾರ ಸಂಸ್ಥೆಯ ಬಗ್ಗೆ ಇದರಲ್ಲಿ
ಸಾರ್ವಜನಿಕ/ಸಂಸ್ಥೆಯ ಹೆಸರು ಮಾಲೀಕತ್ವದ ಬಗ್ಗೆ
ಮಾಲೀಕರು ಅಭಿವೃದ್ಧಿ ಸಂಸ್ಥೆಯ ಸಾರ್ವಜನಿಕರು
ಅಭಿವೃದ್ಧಿಯಾಗಿರುವ ಸ್ಥಳೀಯ ಸಂಸ್ಥೆಗಳು

ಡಿ) ಸಾರ್ವಜನಿಕರಿಗೆ ಅಭಿವೃದ್ಧಿ ಮಾಲೀಕತ್ವ ಸ್ಥಳದ ಬಗ್ಗೆ
ಸಿಬ್ಬಂದಿ 10-12 ರಂತೆ ಸಂಖ್ಯೆ ಕಾರ್ಯನಿರ್ವಹಣೆ
ಸಂಬಂಧಪಟ್ಟವರಿಗೆ ಹೆಚ್ಚಿನ 300 ಸಾರ್ವಜನಿಕರ ಸಾರ್ವಜನಿಕರಿಗೆ
ಮಾಲೀಕತ್ವಕ್ಕಾಗಿ ಇರುವ. ಇದರ ಸಂಸ್ಥೆಯ ಕಾರ್ಯ
ಸಾರ್ವಜನಿಕರಿಗೆ ಮಾಲೀಕತ್ವ ಸಿಗುವ ಅರಿವು
ಮಾಲೀಕತ್ವವಿರುವ.

ಇ) ಸಾರ್ವಜನಿಕ/ಸಂಸ್ಥೆಯ/ಸಾರ್ವಜನಿಕರ ಮಾಲೀಕತ್ವ
ಬೆಳವಣಿಗೆಯ ಸಾರ್ವಜನಿಕ ಸ್ಥಳೀಯ ಸಂಸ್ಥೆಗಳ
ಮಾಲೀಕತ್ವದಲ್ಲಿ ಸಾರ್ವಜನಿಕರು ಸಂಸ್ಥೆಯ ಬಗ್ಗೆ
ಸಾರ್ವಜನಿಕರಿಗೆ ಮಾಲೀಕತ್ವ ಸಾರ್ವಜನಿಕರ ಸಂಸ್ಥೆಯ
ಅಭಿವೃದ್ಧಿಯಾಗಿರುವ ಸ್ಥಳೀಯ ಸಂಸ್ಥೆಗಳು

ಪಾರ್ಕಿಂಗ್ ಸಂಖ್ಯೆ:- ಯಾರ ಹೆಸರು ಮಾಲೀಕತ್ವದ ಬಗ್ಗೆ

ಕಾಯ್ದೆಗೆ ಸಂಖ್ಯೆ: ಸಅಇ 760 ಎಂಎಸ್‌ಎಫ್ 2016, ದಿನಾಂಕ: 12-01-2017 ರಂತೆ ಅಧಿಸೂಚನೆ ದೃಢೀಕೃತಗೊಂಡಿದೆ. ಸದರಿ ಸಂಸ್ಥೆಯೊಂದಿಗೆ ಒಪ್ಪಂದಿಕೆ/ಕರಾರು ಮಾಡಿಕೊಳ್ಳುವ ಪ್ರಕ್ರಿಯೆ ಮುಂದುವರಿಸಲಾಗಿರುತ್ತದೆ.

೨ ದಿನಾಂಕ: 04-10-2017 ರಂದು ಮುಂಡೂರು ಗ್ರಾಮದಲ್ಲಿ ಘನತ್ಯಾಜ್ಯ ಘಟಕಕ್ಕೆ ಭೂಮಿಯ ಸಮಿತಿಯು ಸದಸ್ಯರುಗಳು ಸ್ಥಳ ಪರಿಶೀಲಿಸಿದರು ಈಗಾಗಲೇ ಪ್ರಾರಂಭದಲ್ಲಿ ಸೂಚಿತ ಒಪ್ಪಂದದ ಪ್ರಕಾರ 6(ii) ಟನ್ ತ್ಯಾಜ್ಯ ವಿಲೇವಾರಿ ಮಾಡಲು ಘನತ್ಯಾಜ್ಯ ಕಲ್ಪಿಸಲಾಗಿದ್ದು, ಪ್ರಸ್ತುತದಲ್ಲಿ 100 ಟನ್ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ ಎಂದು ಗಮನಿಸಿದರು.

೩ ಆ ನಂತರ ಕನ ಬರದೇ ಇಲ್ಲಿ ಯಾವುದೇ ಕಾರ್ಯವನ್ನು ಮುಂದುವರಿಸಲಾಗುವುದಿಲ್ಲ ಎಂಬ ಬಯಪ್ರಮಾಣಕ್ಕೆ ಜಿಲ್ಲಾ ಪಂಚಾಯಿತಿಯವರು ಆದರೆ ರಾಜ್ಯದ ಇತರೆ ಕಡೆ ಈ ರೀತಿಯ ಘಟಿಕಗಳನ್ನು ಯಾವುದು ಏನು ಉದ್ದೇಶಿಸಲಾಗುತ್ತಿದೆಯೋ ಅಂತಹ ಕಡೆ ಸದರಿ ಘಟಿಕದಲ್ಲಿರುವ ಯಂತ್ರಗಳನ್ನು ಅಳವಡಿಸಲು ಮುಂಗಡ ಉಪಯೋಗ ಪಡೆದುಕೊಳ್ಳುವ ಒಳ್ಳೆಯದು ಎಂದು ಮಾನ್ಯ ಅಯುಕ್ತರು ಸಮಿತಿಗೆ ತಮ್ಮ ಅಭಿಪ್ರಾಯ ತಿಳಿಸಿದರು.

೪ ದಿ. 16-12-2017 ರಂದು ಕರ್ನಾಟಕ ವಿಧಾನ ಸಭಿಜಸ್ಥಿನ ಭರವಸೆಗಳ ಸಮಿತಿ ಎಂದು ಸಭೆಗೆ ಸಂಬಂಧಿಸಿದಂತೆ ಅಧ್ಯಕ್ಷರು, ಮಾ ಎಸ್ ಶಿವರಾಜ್ ಆರ್ ಎಸ್ ಎಸ್ ರವರು (We have not filed any original suite Rather we have joined for public interest Litigation stating that ಕ್ಯಾಪ್ಟಲೈಷನ್ ಮಾಡಿರುವುದು ತಪ್ಪು ನಮಗೆ restore ಮಾಡಿ ಲೆಂಡಿಂಗ್ ಕ್ಲಿಯರ್ ಮಾಡಿ ಎಂದು ಬೇಡಿಕೆಯಂತೆ ಸಮಿತಿಯು ಸ್ಪಷ್ಟವಾದ ನೀಡಿದ್ದು ಆರ್ಡರ್ ಮಾಡಿದ್ದಾರೆ ಕ್ಯಾಪ್ಟಲ್ ಎಷ್ಟು ಅವರಿಗೆಷ್ಟು ಹಣ ಕೊಡಬೇಕೋ ಆ ಹಣವನ್ನು ಬಿಡುಗಡೆ ಮಾಡಿ ಕೆಲಸ ಮಾಡಿಸಿ ಮಾಲೂರು ಸಂಬಂಧಪಟ್ಟವರಿಗೆ ಕನ್ಸಿಸ್ಟ್ ಮಾಡಿ ಸರಿಪಡಿಸುವುದಕ್ಕೆ ತಿಳಿಸಿರುವಂತೆ ಇದನ್ನು ರಿಕಾರ್ಡಗೆ ರಿಜಿಸ್ಟ್ ಮಾಡಿರುವುದು ಮಾತ್ರ ಸರ್ಕಾರದ ನಿಯಮವನ್ನು ಹಾಗು ಬಜೆಟ್‌ನಲ್ಲಿ ಸೇರಿಸಲ್ಪಟ್ಟಿರುವುದಿಲ್ಲವೆಂದು ಸಮಿತಿಯ ಮುಂದೆ ತಿಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮುಂದಿನ ಕ್ರಮಕ್ಕಾಗಿ ಇದನ್ನು ಸಭೆಯ ಗಮನಕ್ಕೆ ತರಲಾಗಿದೆ.

ಉಪಾಯುಕ್ತರು (ಆ & ಅ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರ - 2

ಅಧ್ಯಾಯ-1

ಕರ್ನಾಟಕ ಸಮೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ

ತ್ಯಾಜ್ಯದಿಂದ ಇಂಧನ ಉತ್ಪಾದನೆ ಯೋಜನೆಯ ವಿಫಲತೆ

ಕಂಡಿಕೆಯ ಸಂಕ್ಷಿಪ್ತ ವಿವರ:

ಸಿಎಜಿ ವರದಿ 2014-15 ಕಂಡಿಕೆ ಸಂಖ್ಯೆ 3.15.9 ಕರ್ನಾಟಕ ಸಮೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ತ್ಯಾಜ್ಯದಿಂದ ಇಂಧನ ಯೋಜನೆ ವಿಷಯದ ಬಗ್ಗೆ ವಿಮರ್ಶಿಸಿದೆ. ಕಂಡಿಕೆಯಲ್ಲಿ ವಿಮರ್ಶಿಸಿದಂತೆ, "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ"ಯು ದಿನವೊಂದಕ್ಕೆ 1000 ಟನ್ ತ್ಯಾಜ್ಯವನ್ನು ಸಂಸ್ಕರಣೆ ಮಾಡಿ 8 ಮೆ.ವ್ಯಾ. ವಿದ್ಯುತ್ ಉತ್ಪಾದನಾ ಘಟಕವನ್ನು ಬೆಂಗಳೂರಿನ ಸಮೀಪದಲ್ಲಿನ ಮಂಡೂರು ಗ್ರಾಮದಲ್ಲಿ ಸ್ಥಾಪಿಸುವ ಸಲುವಾಗಿ ಮೆ: ಶ್ರೀನಿವಾಸ ಗಾಯಿತ್ರಿ ರಿಸೋರ್ಸ್ ಲಿಕವರಿ ಲಿಮಿಟೆಡ್ ಇವರ ಜೊತ ಒಡಂಬಡಿಕೆಯನ್ನು ಮಾಡಿಕೊಂಡು ನಿವೇಶನವನ್ನು ಒದಗಿಸಿಕೊಟ್ಟು 20 ತಿಂಗಳ ಅವಧಿಯೊಳಗೆ (ಏಪ್ರಿಲ್ 2007) ಯೋಜನೆಯನ್ನು ಕಾರ್ಯಗತಗೊಳಿಸಬೇಕಾಗಿತ್ತು.

ಈ ಸಂಬಂಧ ಯೋಜನಾ ಮೌಲ್ಯ ಮಾಪನ ಸಮಿತಿಯು ವಿಷಮಯ ಸಂಯೋಗಗಳ ನಿವಾರಣ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳದ ವಿದ್ಯುತ್ ಘಟಕವನ್ನು ಪ್ರಾರಂಭಗೊಳಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿತು. ಗುತ್ತಿಗೆದಾರರು ಮಲಿನಕಾರಕಗಳ ನಿವಾರಣೆಗೆ ಬೇಕಾದ ಉಪಕರಣಾಗಳನ್ನು ಮೂಲ ಸವಿವರ ಯೋಜನಾ ವರದಿಯಲ್ಲಿ ಪಂಚಿಸಿಲ್ಲವಾದ್ದರಿಂದ, ಈ ಉದ್ದೇಶವನ್ನು ಸಾಧಿಸಲು ರೂ. 19.40 ಕೋಟಿ ಹೆಚ್ಚುವರಿ ಬೆಲ್ಟಿದ ಉಪಕರಣಗಳು ಅವಶ್ಯಕವಾಗಿದೆಯೆಂದು ತಿಳಿಸಿದ್ದಾರೆ. ಫೆಬ್ರವರಿ 2014ರ ವೇಳೆಗೆ ಈ ಯೋಜನೆಗೆ ಬಿಬಿಎಂಪಿ ರೂ. 73.14 ಕೋಟಿ ವೆಚ್ಚ ಮಾಡಿದ್ದು, ಸೆಪ್ಟೆಂಬರ್ 2015 ರವರೆಗೂ ಯೋಜನೆಯು ಕಾರ್ಯರೂಪಕ್ಕೆ ಬಂದಿರುವುದಿಲ್ಲವೆಂದು ವಿಮರ್ಶಿಸಲಾಗಿದೆ.

ಇಲಾಖೆಯ ಉತ್ತರ:

ಬಿಬಿಎಂಪಿ ಆಯುಕ್ತರು ಯೋಜನೆಯ ಬಗ್ಗೆ ವಿವರಿಸುತ್ತಾ, ಮೂಲತಃ ಈ ಯೋಜನೆಯಿಂದ ದಿನವೊಂದಕ್ಕೆ ಸುಮಾರು 1000 ಟನ್‌ಗಳಷ್ಟು ಘನ ತ್ಯಾಜ್ಯವನ್ನು ಸಂಸ್ಕರಣೆ ಮಾಡಿ 8 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವ ಪ್ರಸ್ತಾವನೆ ಇತ್ತು. ಅದರಂತೆ ಮೆ: I-Dec ಎನ್ನುವಂತಹ ಸಲಹಾ ಸಂಸ್ಥೆಯಿಂದ ಸವಿವರ ಯೋಜನಾ ವರದಿ (DPR) ತಯಾರು ಮಾಡಿ 2002ರಲ್ಲಿ ಟೆಂಡರು ಕರೆಯಲಾಗಿತ್ತು. ಟೆಂಡರ್ ಸಲ್ಲಿಸುವುದಕ್ಕೆ ಒಂದು ತಿಂಗಳ ಸಮಯ ನೀಡಲಾಗಿತ್ತು. 2004 ರಲ್ಲಿ ತಾಂತ್ರಿಕ ಮತ್ತು ಪರಿಣಾಮಿನ ಬಿಡ್‌ಗಳ ಮೌಲ್ಯ ಮಾಪನ ಮಾಡಲಾಯಿತು. ಯೋಜನೆಗೆ ಬಿಬಿಎಂಪಿಯ ಸ್ಥಾಯಿ ಸಮಿತಿ, ನಗರಾಭಿವೃದ್ಧಿ ಇಲಾಖೆ ಹಾಗೂ ಅಂತಿಮವಾಗಿ ಸರ್ಕಾರವು ಡಿಸೆಂಬರ್ 2007 ರಲ್ಲಿ ಅನುಮೋದನೆ ನೀಡಿತು.

ಬಿ.ಬಿ.ಎಂ.ಪಿ. ಹಾಗೂ ಮೆ: ಶ್ರೀನಿವಾಸ ಗಾಯಿತ್ರಿ ರಿಸೋರ್ಸಸ್ ರಿಕವೆರಿ ಲಿ. ರವರು ಪರಸ್ಪರ ಒಪ್ಪಂದಕ್ಕೆ ಸಹಿ ಮಾಡಿ, ಬಿಬಿಎಂಪಿ ಯೋಜನೆಗೆ ಅವಶ್ಯಕವಾದ ನಿವೇಶನವನ್ನು ಗುತ್ತಿಗೆದಾರರಿಗೆ ನೀಡಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ 2007 ರಲ್ಲಿ ಘಟಕ ಸ್ಥಾಪನೆಗೆ ಅವಶ್ಯಕ ನಿರಾಕ್ಷೇಪಣೆ ಪತ್ರಗಳನ್ನು ಪಡೆದ ನಂತರ ಬಿ.ಬಿ.ಎಂ.ಪಿ ತ್ಯಾಜ್ಯ ಕಳುಹಿಸಲು ಪ್ರಾರಂಭಿಸಿತು.

ಬಿ.ಬಿ.ಎಂ.ಪಿಯು ಜುಲೈ 2007ರಿಂದ ಗುತ್ತಿಗೆದಾರರಿಗೆ ಪ್ರತಿ ದಿನ 300 ರಿಂದ 400 ಟನ್ ತ್ಯಾಜ್ಯವನ್ನು ಒದಗಿಸಿತು. ಆದರೆ, ಈ ತ್ಯಾಜ್ಯವನ್ನು ಗುತ್ತಿಗೆದಾರರು ಬಳಸದೆ ಇದ್ದುದರಿಂದ ಪದೇ ಪದೇ ನೋಟೀಸ್ ಜಾರಿ ಮಾಡಿತು. ತದನಂತರ, ಗುತ್ತಿಗೆದಾರರು ದಿನಕ್ಕೆ 1000 ಟನ್ ತ್ಯಾಜ್ಯದ ಬೇಡಿಕೆಯನ್ನು ಮುಂದಿಟ್ಟರು. ಗುತ್ತಿಗೆದಾರರು ಯೋಜನೆಯಿಂದ ವಿದ್ಯುತ್ ಉತ್ಪಾದನೆ ಮಾಡಿದ್ದಲ್ಲದೆಯೂ ತ್ಯಾಜ್ಯವನ್ನು ಬಳಕೆ ಮಾಡಿ ಗೊಬ್ಬರ ಉತ್ಪಾದನೆ ಮಾಡಲು ಬಿ.ಬಿ.ಎಂ.ಪಿ 50 ಎಕರೆ ಜಾಗ ನೀಡಿರುತ್ತದೆ. ಗೊಬ್ಬರ ಉತ್ಪಾದನೆಯಲ್ಲೂ ಯಾವುದೇ ಪ್ರಗತಿ ಸಾಧಿಸದಿದ್ದುದರಿಂದ ತ್ಯಾಜ್ಯವನ್ನು ವಿಲೇವಾರಿಗೊಳಿಸದೆ, ಮಂಡೂರು ಗ್ರಾಮ ತ್ಯಾಜ್ಯ ಸುರಿಯುವ ಪ್ರದೇಶವಾಗಿ ಮಾರ್ಪಾಡಾಯಿತು.

ಬಿ.ಬಿ.ಎಂ.ಪಿ.ಯು, ಗುತ್ತಿಗೆದಾರರಿಗೆ 9.88 ಲಕ್ಷ ಟನ್ ತ್ಯಾಜ್ಯ ಒದಗಿಸಲು ರೂ. 5.74 ಕೋಟಿಯನ್ನು ಸೇವಾ ಶುಲ್ಕ ರೂಪದಲ್ಲಿ (Tipping charges) ವೆಚ್ಚ ಮಾಡಿರುತ್ತದೆ. ಆದರೆ, ಒಪ್ಪಂದದ ಮೇರೆಗೆ ತ್ಯಾಜ್ಯ ಒದಗಿಸಿದ್ದಕ್ಕೆ ಗುತ್ತಿಗೆದಾರರು ಒಂದು ಟನ್ ತ್ಯಾಜ್ಯಕ್ಕೆ ರೂಪಾಯಿ ಒಂದರಂತೆ ಸೇವಾಶುಲ್ಕವನ್ನು ಬಿ.ಬಿ.ಎಂ.ಪಿ.ಗೆ ನೀಡಬೇಕಾಗಿತ್ತು.

ಸರ್ಕಾರದ 6 ಎಕರೆ ಜಮೀನನ್ನು ಒತ್ತೆ ಇಟ್ಟುಕೊಂಡು ಈ ಕೆಳಕಂಡ ವಾಣಿಜ್ಯ ಹಣಕಾಸು ಸಂಸ್ಥೆಗಳು/ಬ್ಯಾಂಕ್‌ಗಳ ಮೂ: ಶ್ರೀನಿವಾಸ ಗಾಯಿತ್ರಿ ರಿಸೌರ್ಸಸ್ ರಿಕವರಿ ಲಿಮಿಟೆಡ್‌ಗೆ ಸಾಲ ಮಂಜೂರುಮಾಡಿರುತ್ತವೆ.

	ವಾಣಿಜ್ಯ ಹಣಕಾಸು ಸಂಸ್ಥೆಗಳ/ಬ್ಯಾಂಕ್‌ಗಳ ವಿವರ	ಮಂಜೂರು ಮಾಡಿರುವ ಮೊತ್ತ (ರೂ. ಕೋಟಿಗಳಲ್ಲಿ)
1	ಇಂಡಿಯನ್ ಬ್ಯಾಂಕ್, ಎಂ.ಜಿ ರಸ್ತೆ ಶಾಖೆ	19.75
2	ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್, ಎಂ.ಜಿ. ರಸ್ತೆ ಶಾಖೆ	19.00
3	ಐ.ಎಫ್.ಸಿ.ಐ.ಎಲ್	14.00
	ಒಟ್ಟು	52.75

ಆದರೆ, ಗುತ್ತಿಗೆದಾರರು ಎಷ್ಟು ಸಾಲವನ್ನು ಬ್ಯಾಂಕ್‌ನಿಂದ ಪಡೆದಿದ್ದಾರೆ ಎಂಬ ಮಾಹಿತಿ ಬಿ.ಬಿ.ಎಂ.ಪಿ.ಯಲ್ಲಿ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸಮಿತಿಯ ವಿಮರ್ಶೆ:

"ತ್ಯಾಜ್ಯದಿಂದ ಇಂಧನ ಯೋಜನೆಗೆ" ಸಂಬಂಧಿಸಿದಂತೆ, ದಿನಾಂಕ 02.05.2017, 09.05.2017 ಹಾಗೂ 16.05.2017ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ವಿಷಯವು ಇಂಧನ ಇಲಾಖೆಯ ವ್ಯಾಪ್ತಿಗೊಳಪಟ್ಟ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಂಬಂಧಿಸಿದ್ದಾಗಿದ್ದು, ಇಂಧನ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೊಳಪಟ್ಟ ಬಿಬಿಎಂಪಿ ಸಹಭಾಗಿತ್ವದಲ್ಲಿ ಪ್ರಾರಂಭಿಸಿ, ವಿದ್ಯುತ್ತನ್ನು ಕೆ.ಪಿ.ಟಿ.ಸಿ.ಎಲ್. ಮುಖಾಂತರ ಬೆಸ್ಕಾಂಗೆ ಸರಬರಾಜು ಮಾಡುವುದು ಯೋಜನೆಯ ಮೂಲ ಉದ್ದೇಶವಾಗಿತ್ತು. ಆದರೆ, ಇಲ್ಲಿಯವರೆವಿಗೂ ಯೋಜನೆ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಇಂಧನ ಇಲಾಖೆ, ಯೋಜನೆಗೆ ಯಾವುದೇ ಬಂಡವಾಳ ಹೂಡಿಲ್ಲದಿರುವುದರಿಂದ ಇಂಧನ ಇಲಾಖೆಯಿಂದ ಯಾವುದೇ ಅಪ್ಯವಹಾರವಾಗಿಲ್ಲವೆಂದು ಇಂಧನ ಇಲಾಖೆಯು ತಿಳಿಸಿತು. ಬಿಬಿಎಂಪಿಯು ಸರ್ಕಾರದ ಭೂಮಿಯನ್ನು ಅಡವಿಟ್ಟ ಗುತ್ತಿಗೆದಾರರಿಗೆ ರೂ. 52.95 ಕೋಟಿ ಸಾಲ ಪಡೆಯಲು ಅನುಮತಿ ನೀಡಿದ್ದು, ಯೋಜನೆಯು ಈವರೆಗೆ ಕಾರ್ಯರೂಪಕ್ಕೆ ಬರದೇ ಇರುವುದು ಬಿ.ಬಿ.ಎಂ.ಪಿ.ಯಿಂದ ಆಗಿರುವ ಅವ್ಯವಹಾರವೆಂದು ಸಮಿತಿಯು ಅಭಿಪ್ರಾಯಿಸಿತು.

ಸಮಿತಿಯ ಸದಸ್ಯರಾದ ಶ್ರೀ ಅರವಿಂದ ಲಿಂಬಾವಳಿಯವರು ಮಂಡೂರಿನಲ್ಲಿ ನೆಗೆತಗೊಂಡ ಘಟಕದಿಂದ ಆಗುತ್ತಿರುವ ಪರಿಸರ ಮಾಲಿನ್ಯ ಮತ್ತು ಘಟಕದಲ್ಲಿನ ಪ್ರಸ್ತುತ ಸ್ಥಿತಿಯ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಿದರು. ಮೆ: ಶ್ರೀನಿವಾಸ ಗಾಯಿತ್ರಿ ರಿಸೌರ್ಸಸ್ ರಿಕವರಿ ಲಿಮಿಟೆಡ್ ಅವರೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದ ಪ್ರಕಾರ ಮಂಡೂರಿನ ವಿದ್ಯುತ್ ಉತ್ಪಾದನಾ ಘಟಕವು ಏಪ್ರಿಲ್ 2007ರಲ್ಲಿ ಕಾರ್ಯಾರಂಭ ಮಾಡಬೇಕಾಗಿತ್ತು. ಫೆಬ್ರವರಿ 2014ರ ವೇಳೆಗೆ ಈ ಯೋಜನೆಗೆ ರೂ. 73.34 ಕೋಟಿ ವೆಚ್ಚ ಮಾಡಿದ್ದರೂ ತ್ಯಾಜ್ಯ ವಸ್ತುಗಳಿಂದ ವಿದ್ಯುತ್ ಉತ್ಪಾದನೆ ಮಾಡದಿರುವುದನ್ನು ಸಮಿತಿಯು ಕಟುವಾಗಿ ಟೀಕಿಸಿ ಯೋಜನೆ ಪ್ರಗತಿ ಹಂತದಲ್ಲಿ ಅಧಿಕಾರಿಗಳಿಂದಾದ ಮೇಲ್ವಿಚಾರಣೆ ಕೊರತೆಯನ್ನು ಗಂಭೀರವಾಗಿ ಪರಿಗಣಿಸಿತು.

ಮುಡೂರು ಗ್ರಾಮದಲ್ಲಿ ಹಾಕಲಾಗಿರುವ ತ್ಯಾಜ್ಯದಿಂದ ಪರಿಸರ ಮಾಲಿನ್ಯವಾಗಿದ್ದು, ಅಂತರ್ಜಲ ಕಲುಷಿತ ವಾಗಿದೆ ಮಂಡೂರನ್ನು ತ್ಯಾಜ್ಯ ಸುರಿಯುವ ಪ್ರಾಂತವನ್ನಾಗಿ ಮಾಡಿ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಾಸಿಸುವ ಜನರ ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮ ಬಗ್ಗೆ ಚರ್ಚಿಸಿ, ಈ ಬಗ್ಗೆ ಬಿ.ಬಿ.ಎಂ.ಪಿ. ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ನಿರ್ದೇಶಿಸಿತು.

ಯೋಜನೆಯ ವಿಫಲತೆಗೆ ಕಾರಣರಾದ ಬಿ.ಬಿ.ಎಂ.ಪಿ. ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳದಿರುವ ಬಗ್ಗೆ ಸಮಿತಿಯು ಸುದೀರ್ಘವಾಗಿ ಚರ್ಚಿಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ತ್ವರಿತ ತನಿಖೆ ನಡೆಸಲು ಪ್ರಕರಣವನ್ನು ಎಸಿಬಿಗೆ ವಹಿಸಬೇಕೆಂದು ಹಾಗೂ ಗುತ್ತಿಗೆದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಹಾಗೂ ಗುತ್ತಿಗೆದಾರರಿಂದ ಆರು ಎಕರೆ ಭೂಮಿಯನ್ನು ಹಿಂಪಡೆಯಲು ಜರುಗಿಸಿರುವ ಕ್ರಮದ ಬಗ್ಗೆ ಚರ್ಚಿಸಿತು.

ಮಂಡೂರಿನ ತ್ಯಾಜ್ಯದಿಂದ ಇಂಧನ ಉತ್ಪಾದನಾ ಘಟಕದಲ್ಲಿ ಸ್ಥಾಪಿಸಿದ ಯಂತ್ರೋಪಕರಣಗಳನ್ನು ಬಳಸದೇ ಇರುವುದರಿಂದ ಯಂತ್ರೋಪಕರಣಗಳು ನಿರುಪಯುಕ್ತವಾಗಿರಬಹುದೆಂಬ ಶಂಕೆಯನ್ನು ಸಮಿತಿಯು ವ್ಯಕ್ತಪಡಿಸಿತು.

ಸಮಿತಿಯ ಅಭಿಪ್ರಾಯ/ಶಿಫಾರಸ್ಸುಗಳು:

1. ಪ್ರಕರಣವನ್ನು ಎ.ಸಿ.ಬಿ.ಗೆ (ACB) ವಹಿಸಿ ಮೂರು ತಿಂಗಳೊಳಗೆ ತನಿಖೆ ಪೂರ್ಣಗೊಳಿಸುವುದು;
2. ತಪ್ಪಿತಸ್ಥರ ವಿರುದ್ಧ ತನಿಖೆ ನಡೆಸಿ ತಿಸ್ತಿನ ಕ್ರಮ ಜರುಗಿಸುವುದು;
3. ಸರ್ಕಾರಕ್ಕೆ ಹೆಚ್ಚುವರಿ ಹೊರೆಯಾಗದಂತೆ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆಯ ಯೋಜನೆಯನ್ನು ಪ್ರಾರಂಭಿಸುವುದು;
4. ರೂ. 52.74 ಕೋಟಿ ಸಾಲಕ್ಕೆ ಒತ್ತೆ ಇಟ್ಟಿರುವ ಸರ್ಕಾರದ ಆರು ಎಕರೆ ಭೂಮಿಯನ್ನು ಹಿಂದಕ್ಕೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳುವುದು;
5. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮವು ನವೀಕರಿಸಬಹುದಾದ ಇಂಧನದಲ್ಲಿ ನೋಡಲ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ, ಯೋಜನೆಯನ್ನು ಜಾರಿಗೆ ತರುವಲ್ಲಿ ನಿಗಮವು ಮೇಲ್ವಿಚಾರಣೆ ವಹಿಸಿ, ತಾಂತ್ರಿಕ ಬೆಂಬಲ ಮತ್ತು ಸಲಹೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ.
6. ಮಂಡೂರು ಹಾಗೂ ಸುತ್ತಮುತ್ತಲಿನ ಗ್ರಾಮದಲ್ಲಿ ಅಂತರ್ಜಲ ಕಲುಷಿತವಾಗಿರುವುದರಿಂದ ಆ ಜನರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.
7. ಬಿಬಿಎಂಪಿಯು ಈ ಯೋಜನೆಗೆ ಸಂಬಂಧಪಟ್ಟಂತೆ ಪಾವತಿ ಮಾಡಿರುವ ಸಮಗ್ರ ವೆಚ್ಚದ ತನಿಖೆ ನಡೆಸುವುದು.

ಅನುಬಂಧ - 3

Additional Points to consider

1. The BBMP after awarding the Tender had taken time of 2 years and 7 months to Enter in-to Concession Agreement.
2. The BBMP after execution of the Concession Agreement had taken 3 years time for handing over the land and getting Pollution Control Board clearance ,
3. The Commissioner BBMP in his letter dated 28/10/2008 had sent letter to The Manager, Indian Bank asking to stop further funding to SGRRL. Quoting that the project is in process of cancellation. To revoke the cancellation order, restoration of Bank Loan and to bring back the vendors and suppliers of Machineries to SGRRL took time of almost 2 years.
4. Agreed supports of Government of Karnataka by order No. 138 /MNG 2009 dated 5/11/2012 till today not released, even after the laps of 4 years six months.

5. The BBMP is keeping SGRRL 's bills pending since the year 2008 to the tune of 13.30 crs plus interest

6. The False case was filed by BBMP against Joint Managing Director, and other Directors of SGRR LTD.,in the year December 2012 , and which was struck down by Court of Law.
7. Furon Mitigation System asked to implement , which should have been supported by Karnataka Government which was not envisaged at the time of Tender / Agreement entered.
8. BWSSB has given 18.75 Crs estimate to provide water for power generation. But SGRRL invested for Air-cooled condenser 6.75 crs additionally which saved huge monies to Government of Karnataka.
9. SGRRL as specifically advised the BBMP to dump the MSW during the time between 8.00 am and 5.00 pm only , as per the terms of Concession Agreement dated 24/6/2005 and conditions stipulated in PAGE / clause No..... But

the BBMP used to unloaded the MSW inside the site and as well at the opposite area during the nights, due to this act of BBMP of dumping the of MSW which has caused very bad odor spreading to surrounding villages. The surrounding villagers got irritated and expressed their ire with Government.

10. There was a fire accident in the month of October 2012 . The BBMP commissioner and other officials visited the project and sanctioned Rs.5.00 Crs soft loan with a condition to adjust from pending bills but only Rs.50 lakhs was released. SGRRL has incurred huge losses and unable to complete the power plant

---------- X ----------